ಸಂಪಾದಕರು :
ಎಂ.ಎಸ್. ವಿಕಾಸ್

ಶನಿವಾರ, ಜೂನ್ 10, 2023
ದಾವಣಗೆರೆ, ಪುಟ : 6 ರೂ : 5
ಸಂಪುಟ : 50 ಸಂಚಿಕೆ : 27 RNI : 27369/75

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

50 1974 2023
janathavani@mac.com
www.janathavani.com
08192 254736 91642 99999

THE TEAM ACADEMY
Davangere & Shivamogga
LONG TERM FOR NEET & IIT - 2024
CLASSES STARTS FROM 15TH JUNE 2023
2022 ನೇ ಸಾಲಿನ NEET ಪರೀಕ್ಷೆಯಲ್ಲಿ ಅತ್ಯುತ್ತಮ ಸಾಧನೆ..!
DAVANGERE DIST 1ST IN KVPY 2022
AIR - 820
NEET 2022 TOPPERS

SOURAV P MUDADEVANNANAVAR 655/720
SURYAVARDHAN H PATIL 640/720
ABHISHEAK M ADMANI 627/720
AJAY KUMAR P G 615/720
PAVAN B B 615/720
VARUN BYADAGI 605/720
For Davangere : 9035109411, 9538546758
For Shivamogga : 9902303441, 9963505593



ಚಿತ್ರ: ರಶೀಕ್, ಜನತಾವಾಣಿ

**ಸಾರಂಗಗಳ ಸೆಣಸಾಟ ...** ದಾವಣಗೆರೆ ತಾಲ್ಲೂಕು ಆನಗೋಡು ಇಂದಿರಾ ಪ್ರಿಯದರ್ಶಿನಿ ಪ್ರಾಣಿ ಸಂಗ್ರಹಾಲಯದಲ್ಲಿ ಎರಡು ಸಾರಂಗಗಳ ಪ್ರೀತಿಯ ಸೆಣಸಾಟದ ದೃಶ್ಯ.

# ಎಸ್ಸೆಸ್ಸೆಂಗೆ ಜಿಲ್ಲಾ ಉಸ್ತುವಾರಿ



ಬೆಂಗಳೂರು, ಜೂ. 9 - ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, 31 ಜಿಲ್ಲೆಗಳಿಗೂ ಇಂದು ಉಸ್ತುವಾರಿ ಸಚಿವರ ನೇಮಕ ಮಾಡಿ ಆದೇಶ ಹೊರಡಿಸಿದ್ದು, ತಾವು ಯಾವುದೇ ಜಿಲ್ಲೆಯ ಉಸ್ತುವಾರಿ ಹೊಣೆಗಾರಿಕೆ ತೆಗೆದುಕೊಂಡಿಲ್ಲ.

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಬೃಹತ್ ಬೆಂಗಳೂರು ನಗರದ ಉಸ್ತುವಾರಿ ವಹಿಸಿದ್ದರೆ, ಸಮಾಜ ಕಲ್ಯಾಣ ಸಚಿವ ಡಾ. ಹೆಚ್.ಸಿ. ಮಹದೇವಪ್ಪ ಅವರಿಗೆ ಮೈಸೂರು ಜಿಲ್ಲಾ ಉಸ್ತುವಾರಿಯಾಗಿಯೂ, ಕೆ.ವೆಂಕಟೇಶ್ ಅವರಿಗೆ ಚಾಮರಾಜನಗರ, ಚಲುವರಾಯಸ್ವಾಮಿ ಅವರಿಗೆ ಮಂಡ್ಯ ಜಿಲ್ಲಾ ಉಸ್ತುವಾರಿ ವಹಿಸಿಕೊಟ್ಟಿದ್ದಾರೆ.

ವಿಧಾನ ಮಂಡಲದ ಯಾವುದೇ ಸದಸ್ಯರಲ್ಲದ ಸಚಿವ ಬೋಸ್‌ರಾಜ್ ಅವರಿಗೆ ಕೊಡಗು ಜಿಲ್ಲಾ ಹೊಣೆಗಾರಿಕೆ ನೀಡಲಾಗಿದೆ. ಇನ್ನೂ ಎಸ್.ಎಸ್. ಮಲ್ಲಿಕಾರ್ಜುನ್ ಅವರಿಗೆ ದಾವಣಗೆರೆ ಜಿಲ್ಲೆಯ ಉಸ್ತುವಾರಿ ನೀಡಲಾಗಿದೆ.

ಕಂದಾಯ ಸಚಿವ ಕೃಷ್ಣ ಭೈರೇಗೌಡ ಹಾಗೂ ಪೌರಾಡಳಿತ ಸಚಿವ ರಹೀಂಖಾನ್ ಹೊರತುಪಡಿಸಿ ಎಲ್ಲಾ ಸಚಿವರಿಗೂ ಜಿಲ್ಲಾ ಉಸ್ತುವಾರಿ ದೊರೆತಿದೆ. ಬಹುತೇಕ ಆಯಾ ಜಿಲ್ಲೆಗೆ ಅದೇ ಜಿಲ್ಲೆ ಸಚಿವರನ್ನು ಉಸ್ತುವಾರಿ ಮಾಡಲಾಗಿದ್ದು, ಜಿಲ್ಲೆಯಿಂದ ಹೆಚ್ಚುವರಿ ಆಗಿರುವವರಿಗೆ ಸಂಪುಟದಲ್ಲಿ ಪ್ರಾತಿನಿಧ್ಯವಿಲ್ಲದ ಜಿಲ್ಲೆಗಳ ಹೊಣೆ ವಹಿಸಲಾಗಿದೆ.

ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡರ ಕುಟುಂಬವನ್ನು ಗುರಿಯಾಗಿಟ್ಟುಕೊಂಡು ಅವರ ಕಡು ವೈರಿ ಸಹಕಾರಿ ಸಚಿವ ಕೆ.ಎನ್.ರಾಜಣ್ಣ ಅವರಿಗೆ ಹಾಸನ ಜಿಲ್ಲಾ ಉಸ್ತುವಾರಿ ವಹಿಸಲಾಗಿದೆ.

**ಉಳಿದ ಉಸ್ತುವಾರಿ ಸಚಿವರು :** ಡಾ.ಜಿ. ಪರಮೇಶ್ವರ - ತುಮಕೂರು, ಹೆಚ್.ಕೆ.ಪಾಟೀಲ್ - ಗದಗ, ಕೆ.ಹೆಚ್.ಮುನಿಯಪ್ಪ - ಬೆಂಗಳೂರು ಗ್ರಾಮಾಂತರ, ರಾಮಲಿಂಗಾರೆಡ್ಡಿ - ರಾಮನಗರ, ಕೆ.ಜೆ.ಜಾರ್ಜ್- ಚಿಕ್ಕಮಗಳೂರು, ಎಂ.ಬಿ. ಪಾಟೀಲ್ - ವಿಜಯಪುರ, ದಿನೇಶ್ ಗುಂಡೂರಾವ್ - ದಕ್ಷಿಣ ಕನ್ನಡ, ಸತೀಶ್ ಜಾರಕಿಹೊಳಿ - ಬೆಳಗಾವಿ, ಪ್ರಿಯಾಂಕ ಖರ್ಗೆ - ಕಲಬುರಗಿ, ಶಿವಾನಂದ ಪಾಟೀಲ್ - ಹಾವೇರಿ, ಜಮೀರ್ ಅಹ್ಮದ್ ಖಾನ್ - ವಿಜಯನಗರ, ಶರಣಬಸಪ್ಪ ದರ್ಶನಾಪೂರ್ - ಯಾದಗಿರಿ, ಈಶ್ವರ್ ಖಂಡ್ರೆ - ಬೀದರ್, ಸಂತೋಷ್ ಲಾಡ್ - ಧಾರವಾಡ, ಡಾ.ಶರಣಪ್ರಕಾಶ್ ಪಾಟೀಲ್ - (2ನೇ ಪುಟಕ್ಕೆ)

# ಭೂ ಮಂಜೂರಾತಿ ಮರು ಪರಿಶೀಲನೆ



ಬೆಂಗಳೂರು, ಜೂ. 9 - ಬಸವರಾಜ ಬೊಮ್ಮಾಯಿ ನೇತೃತ್ವದ ಬಿಜೆಪಿ ಸರ್ಕಾರ ಅಧಿಕಾರದಿಂದ ಕೆಳಗಿಳಿಯುವುದಕ್ಕೂ ಮುನ್ನ ಕಳೆದ ಆರು ತಿಂಗಳಲ್ಲಿ ಮಾಡಿರುವ ಭೂ ಮಂಜೂರಾತಿ ಪ್ರಕರಣಗಳ ಕುರಿತು ಪುನರ್ ಪರಿಶೀಲನೆ ಮಾಡುವುದಾಗಿ ಕಂದಾಯ ಸಚಿವ ಕೃಷ್ಣ ಭೈರೇಗೌಡ ಪ್ರಕಟಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಯಾವ ಯಾವ ಸಂಘ - ಸಂಸ್ಥೆಗಳಿಗೆ ಸರ್ಕಾರಿ ಜಮೀನು ಮಂಜೂರು ಮಾಡಲಾಗಿದೆ ಎಂಬುದನ್ನು ಪರಿಶೀಲಿಸಿ, ಅನರ್ಹರಿಗೆ ಮಾಡಿದ್ದರೆ, ಅಂತಹ ಪ್ರಕರಣಗಳ ಮೇಲೆ ಕ್ರಮ ಕೈಗೊಳ್ಳಲಾಗುವುದು ಎಂದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಸೂಚನೆಯಂತೆ ನಮ್ಮ ಇಲಾಖೆ ಯಲ್ಲಿ ನಡೆದಿರುವ ಭೂ ವ್ಯವಹಾರಕ್ಕೆ ಸಂಬಂಧಿ ಸಿದ ಎಲ್ಲಾ ಪ್ರಕರಣಗಳನ್ನು ಮರು ಪರಿಶೀಲನೆ ಮಾಡುತ್ತೇವೆ.

ಯಾವುದೇ ಧರ್ಮ ಅಥವಾ ಸಂಘ-ಸಂಸ್ಥೆಯಾಗಿರಲಿ ನಿಯಮ ಉಲ್ಲಂಘಿಸಿ ಜಮೀನು ಪಡೆದಿದ್ದರೆ, ಅಂತಹ ಪ್ರಕರಣಗಳನ್ನು ಸಂಪುಟದ ಮುಂದಿಟ್ಟು ರದ್ದುಪಡಿಸಲಾಗುವುದು.

ಚುನಾವಣಾ ಸಂದರ್ಭದಲ್ಲಿ (2ನೇ ಪುಟಕ್ಕೆ)

# ಗ್ಯಾರಂಟಿ ಷರತ್ತು ಮತ್ತೆ ಬದಲಾವಣೆ

## ಮಗ ತೆರಿಗೆ ಕಟ್ಟಿದರೂ ತಾಯಿಗೆ ಸಿಗಲಿದೆ ಗೃಹಲಕ್ಷ್ಮಿ ಭಾಗ್ಯ

ಬೆಂಗಳೂರು, ಜೂ. 9 - ಗೃಹಲಕ್ಷ್ಮಿ ಯೋಜನೆಯ ಷರತ್ತಿನಲ್ಲಿ ಮತ್ತೆ ಬದಲಾ ವಣೆ ಮಾಡಲಾಗಿದೆ. ನಿನ್ನೆ ಮಕ್ಕಳು ತೆರಿಗೆ ಕಟ್ಟಿದರೆ ತಾಯಿಗೆ ಗೃಹ ಲಕ್ಷ್ಮಿ ಯೋಜನೆ ಸಿಗುವುದಿಲ್ಲ ಎಂದು ತಿಳಿಸಲಾಗಿತ್ತು. ಶುಕ್ರವಾರ ಮತ್ತೆ ಷರತ್ತು ಬದಲಿಸಲಾಗಿದೆ. ಈಗ ಮಕ್ಕಳು ತೆರಿಗೆ ಕಟ್ಟಿದರೂ, ತಾಯಿ ಗೃಹಲಕ್ಷ್ಮಿ ಯೋಜ ನೆಗೆ ಸೇರಬಹುದು.

ಈ ಬಗ್ಗೆ ಹೇಳಿಕೆ ನೀಡಿರುವ ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್, ಮಕ್ಕಳು ತೆರಿಗೆ ಕಟ್ಟುತ್ತಿದ್ದರೂ, ಗೃಹಲಕ್ಷ್ಮಿ ಯೋಜನೆ ಯಡಿ ತಾಯಿಗೆ 2,000 ರೂಪಾಯಿ ನೀಡಲಾಗುತ್ತದೆ. ಈ ಕುರಿತು ಗೊಂದಲ ಸೃಷ್ಟಿಯಾಗಿತ್ತು. ಈ ಗೊಂದಲ ಪರಿಹರಿಸಲಾಗಿದೆ ಎಂದಿದ್ದಾರೆ.

ಹೊಸ ಷರತ್ತಿನ ಪ್ರಕಾರ ಗಂಡ ತೆರಿಗೆ ಕಟ್ಟುತ್ತಿದ್ದರೆ, ಮನೆಯ ಯಜಮಾನಿಗೆ ಗೃಹ ಲಕ್ಷ್ಮಿ ಯೋಜನೆ ಅನ್ವಯವಾಗು ವುದಿಲ್ಲ. ಆದರೆ ಮಕ್ಕಳು ತೆರಿಗೆ ಕಟ್ಟಿದರೆ ತಾಯಿಗೆ ಯೋಜನೆ ಫಲಾನುಭವಿ ಯಾಗಲು ಅರ್ಹ ಎಂದು ಹೆಬ್ಬಾಳ್ಕರ್ ಸ್ಪಷ್ಟನೆ ನೀಡಿದ್ದಾರೆ. ಗೃಹ ಲಕ್ಷ್ಮಿ ಯೋಜನೆಯನ್ನು ಅದ್ದೂರಿ ಕಾರ್ಯ ಕ್ರಮದ ಮೂಲಕ (2ನೇ ಪುಟಕ್ಕೆ)

# ಮನೆ ಬಾಗಿಲಲ್ಲೇ ಗೃಹಲಕ್ಷ್ಮಿ ಅಪ್‌ಲೋಡ್

ಬೆಂಗಳೂರು, ಜೂ. 9 - ಗೃಹಲಕ್ಷ್ಮಿ ಯೋಜನೆಯ ಅರ್ಜಿಯನ್ನು ಮನೆ ಬಾಗಿಲಲ್ಲೇ ಅಪ್‌ಲೋಡ್ ಮಾಡುವ ಬಗ್ಗೆ ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದು ಕಂದಾಯ ಸಚಿವ ಕೃಷ್ಣ ಭೈರೇಗೌಡ ತಿಳಿಸಿದರು.

ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಜೂ. 15ರಿಂದ ಜುಲೈ 15ರವರೆಗೆ ಅರ್ಜಿ ಸಲ್ಲಿಸಬಹುದು. ಆಗಸ್ಟ್ 15ರಿಂದ ಜಾರಿಗೆ ಬರಲಿದೆ. ಇದಕ್ಕೆ ಮೊಬೈಲ್ ಆಪ್ ಕೂಡ ಅಭಿವೃದ್ಧಿ ಪಡಿಸಲಾಗಿದೆ ಎಂದರು.

ಈಗಾಗಲೇ ಪಿಂಚಣಿ ಪಡೆಯುತ್ತಿರುವವರಿಗೆ ಹೆಚ್ಚುವರಿಯಾಗಿ ಗೃಹ ಜ್ಯೋತಿ ದೊರೆಯಲಿದೆ. 1.30 ಕೋಟಿ ಅರ್ಜಿ ಸಲ್ಲಿಕೆಯಾಗುವ ನಿರೀಕ್ಷೆ ಇದೆ ಎಂದರು. 78 ಲಕ್ಷ ವಿವಿಧ ಪಿಂಚಣಿ ಸೌಲಭ್ಯಗಳನ್ನು ನೀಡಲಾಗುತ್ತಿದೆ.

ವಿದ್ಯಾರ್ಥಿಗಳಿಗೊಂದು ಸಿಹಿ ಸುದ್ದಿ!
HOW TO IMPROVE MEMORY & CONCENTRATION

ಪ್ರಪಂಚದಲ್ಲಿ 95% ವಿದ್ಯಾರ್ಥಿಗಳು ಅವರ ಮೆದುಳಿನ ಎಡ ಭಾಗವನ್ನು ಹೆಚ್ಚು ಬಳಸುತ್ತಾರೆ. ಆದರೆ 5% ವಿದ್ಯಾರ್ಥಿಗಳು ಮೆದುಳಿನ ಬಲ ಭಾಗವನ್ನು ಹೆಚ್ಚು ಹೆಚ್ಚು ಬಳಸಿಕೊಂಡು 90%ಕ್ಕೂ ಅಧಿಕ ಅಂಕ ಗಳಿಸುತ್ತಾರೆ. ಮೆದುಳಿನ ಬಲ ಭಾಗವನ್ನು ಹೆಚ್ಚು ಬಳಸಿಕೊಂಡಂತೆಲ್ಲಾ ನಮ್ಮ ನೆನಪಿನ ಶಕ್ತಿ ಮತ್ತು ಕ್ರಿಯೇಟಿವಿಟಿ ಜಾಸ್ತಿಯಾಗುತ್ತಾ ಹೋಗುತ್ತದೆ ಎನ್ನುತ್ತಾರೆ ರಾಷ್ಟ್ರೀಯ ಖ್ಯಾತ ತರಬೇತುದಾರರಾದ ಎಸ್.ಪ್ರಶಾಂತ್‌ರವರು, ಮೆದುಳಿನ ಇನ್ನೊಂದು ಭಾಗವನ್ನು ಬಳಸುವುದು ಹೇಗೆ ಮತ್ತು ಹೆಚ್ಚು ಅಂಕ ಗಳಿಸುವುದು ಹೇಗೆ ಎಂದು ತಿಳಿಯಲು ಮೆಮೋರಿ ಸೆಮಿನಾರ್‌ನಲ್ಲಿ ನೀವು ತಪ್ಪದೇ ಪೋಷಕರೊಂದಿಗೆ ಭಾಗವಹಿಸಿ ಇದರ ಸದುಪಯೋಗ ಪಡೆದುಕೊಳ್ಳಿ.
ಉಚಿತ ಪ್ರವೇಶ
ಇಂದು (ಶನಿವಾರ) 10-06-2023
1ನೇ ಸೆಮಿನಾರ್ ಸಂಜೆ 6.30 ರಿಂದ 8.00
ನಾಳೆ (ಭಾನುವಾರ) 11-06-2023
2ನೇ ಸೆಮಿನಾರ್ ಬೆಳಿಗ್ಗೆ 11 ರಿಂದ 12.30
(ಯಾವುದಾದರು ಒಂದು ಸೆಮಿನಾರ್‌ನಲ್ಲಿ ಭಾಗವಹಿಸಿ)
ಸ್ಥಳ: ರಂಗ ಮಹಲ್, ಪಿ.ಜೆ. ಬಡಾವಣೆ, ಎ.ವಿ.ಕೆ. ಕಾಲೇಜು ರಸ್ತೆ, ದಾವಣಗೆರೆ.
ಮೆದುಳಿನ ಅದ್ಭುತ ಶಕ್ತಿಯ ಪ್ರದರ್ಶನ ನೋಡಲು ಮರೆಯದಿರಿ.

# ಜಗಳೂರು ತಾಲ್ಲೂಕಿನಲ್ಲಿ ಭಾರೀ ಮಳೆ, ಸಿಡಿಲು ಬಡಿದು ಇಬ್ಬರ ಸಾವು

**ಮೃತರ ಕುಟುಂಬಕ್ಕೆ ತಲಾ ಐದು ಲಕ್ಷರೂ ಪರಿಹಾರ ಘೋಷಿಸಿದ ಜಿಲ್ಲಾ ಉಸ್ತುವಾರಿ ಸಚಿವ ಎಸ್ಸೆಸ್ಸೆಂ. ಶಾಸಕ ಬಿ. ದೇವೇಂದ್ರಪ್ಪ ಸಾಂತ್ವನ.**

ಜಗಳೂರು, ಜೂ. 9- ತಾಲ್ಲೂಕಿನಾದ್ಯಂತ ಇಂದು ಹಲವಾರು ಗ್ರಾಮಗಳಲ್ಲಿ ಗುಡುಗು ಸಹಿತ ಮಳೆಯಾಗಿದ್ದು, ಸಿಡಿಲು ಬಡಿದು ಇಬ್ಬರು ಮೃತಪಟ್ಟಿರುವ ಘಟನೆ ವರದಿಯಾಗಿದೆ.

ತಾಲ್ಲೂಕಿನ ಅಣಬೂರು ಗೊಲ್ಲರಹಟ್ಟಿ ಗ್ರಾಮದಲ್ಲಿ ಹೊಲದಲ್ಲಿ ಇಂದು ಸಂಜೆ ಕೃಷಿ ಚಟುವಟಿಕೆಯಲ್ಲಿ ತೊಡಗಿದ್ದ ಕಾಟಲಿಂಗಪ್ಪ (40) ಮತ್ತು ರಾಜಪ್ಪ (30) ಸಂಜೆ ಸಿಡಿಲಿಗೆ ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಹತ್ತಿ ಬೀಜ ಬಿತ್ತನೆಯಲ್ಲಿ ತೊಡಗಿದ್ದ ಇವರು ಮಳೆ ಜೋರಾಗಿ ಬಂದ ಕಾರಣ ಏರಿಯಲ್ಲಿದ್ದ ಮರದ ಕೆಳಗೆ ಆಶ್ರಯ ಪಡೆದಿದ್ದರು. ಈ ಸಂದರ್ಭದಲ್ಲಿ ಸಿಡಿಲು ಬಡಿದು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಸ್ವಲ್ಪ ದೂರದಲ್ಲಿ ಇದ್ದ ಇತರೆ ಮೂವರು ಪ್ರಾಣಾಪಾಯದಿಂದ (2ನೇ ಪುಟಕ್ಕೆ)

# ಶಕ್ತಿ ಯೋಜನೆಗೆ ರಾಜ್ಯಾದ್ಯಂತ ಏಕಕಾಲಕ್ಕೆ ಚಾಲನೆ



ಬೆಂಗಳೂರು, ಜೂ. 9 -ಮಹಿಳೆಯರು ಬಸ್‌ನಲ್ಲಿ ಉಚಿತವಾಗಿ ಪ್ರಯಾಣಿಸುವ 'ಶಕ್ತಿ' ಯೋಜನೆಗೆ ರಾಜ್ಯಾದ್ಯಂತ ಏಕ ಕಾಲಕ್ಕೆ ಚಾಲನೆ ನೀಡಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನಿರ್ಧರಿಸಿದ್ದು, ಈ ಕುರಿತು ಸಚಿವರು ಮತ್ತು ಶಾಸಕರಿಗೆ ಸೂಚನೆ ನೀಡಿದ್ದಾರೆ.

ಬೆಂಗಳೂರಿನಲ್ಲಿ ನಾನು ಯೋಜನೆಗೆ ಚಾಲನೆ ನೀಡುತ್ತೇನೆ. ಅದೇ ಹೊತ್ತಲ್ಲಿ ಶಾಸಕರು ಮತ್ತು ಜಿಲ್ಲಾ ಸಚಿವರುಗಳು ತಮ್ಮ ತಮ್ಮ ಜಿಲ್ಲೆ ಮತ್ತು ಕ್ಷೇತ್ರಗಳಲ್ಲಿ ಯೋಜನೆಗೆ ಚಾಲನೆ ನೀಡಬೇಕು ಎಂದು ಮುಖ್ಯಮಂತ್ರಿಗಳು ತಿಳಿಸಿದ್ದಾರೆ.

ಹತ್ತನೇ ವರ್ಷದ ಪುಣ್ಯಸ್ಮರಣೆ

ದಿ॥ ಶ್ರೀಮತಿ ಯಮುನಾವತಿ
ಜನನ : 23.05.1965 ಮರಣ : 10.06.2013
ಯಾರ ಹುಟ್ಟು ಎಲ್ಲೋ? ಯಾರ ಸಾವು ಎಲ್ಲೋ?
ಯಾರ ಜೀವನದ ಪಯಣ ಎಲ್ಲಿಗೋ? ಇದನ್ನಾರು ಬಲ್ಲರು?
ಈ ಜೀವನದ ಪಯಣದಲ್ಲಿ ಸಿಗುವ ಪ್ರೀತಿ, ಪ್ರೇಮ, ಸ್ನೇಹ, ಸಂಬಂಧ, ಸೇವೆ ಸಾಧನಗಳು ಮಾತ್ರ ಶಾಶ್ವತ ಎಂದು ಅರಿತು, ಸಾರ್ಥಕ ಜೀವನ ನಡೆಸಿ ನಮ್ಮೆಲ್ಲರಿಗೂ ಆದರ್ಶಮಯವಾದ ನಿಮ್ಮ ಆಶೀರ್ವಾದ ನಮಗೆ ಸದಾ ಇರಲಿ ಎಂದು ನಿಮ್ಮ ಆತ್ಮಕ್ಕೆ ಚಿರಶಾಂತಿ ಕೋರುವ,
✦ ಪತಿ - ಬಿ.ಹೆಚ್. ಮಲ್ಲೇಶಪ್ಪ (ಸೀಮೆಎಣ್ಣೆ), ಮಹಾನಗರ ಪಾಲಿಕೆ ಮಾಜಿ ಸದಸ್ಯರು
✦ ಎಂ. ಹರೀಶ್-ಪುತ್ರ ✦ ಎಂ. ಲಕ್ಷ್ಮಿ-ಪುತ್ರಿ ✦ ಎಂ. ರೇಖಾ - ಪುತ್ರಿ ✦ ಬಸವರಾಜ - ಮೈದುನ
✦ ದುಗ್ಗಮ್ಮ - ಸಹೋದರಿ ✦ ನಿತೀಶ್ ಹೆಚ್ ✦ ಪಲ್ಲವಿ ಹೆಚ್ ✦ ಶ್ರೀಮತಿ ಶ್ವೇತ ಮತ್ತು ಅರುಣ್
✦ ಭೂಮಿ ✦ ಬಿಂದು ✦ ದೀಕ್ಷಾ ಹೆಚ್ ✦ ಬಸಮ್ಮ - ಅಕ್ಕ ✦ ಲಕ್ಕಪ್ಪ-ಮಗ ✦ ಹನುಮಮ್ಮ-ಅಕ್ಕ
✦ ನಾಜೀಮಾ-ಅಜ್ಜಿ ✦ ರೂಪ ಪರಮೇಶ್ವರಪ್ಪ ✦ ಶಿಲ್ಪ ಮಂಜುನಾಥ್ ✦ ದಾನಮ್ಮ ವೆಂಕಟೇಶ್
✦ ನೀಲಮ್ಮ ಪರಮೇಶ್ ✦ ನಾಗರಾಜ ✦ ಸಂತೋಷ ✦ ಗಣೇಶ ✦ ಕೀರ್ತನ ✦ ಕವನ ✦ ಧ್ರುವ
ಹಿತೈಷಿಗಳು : ✦ ಡಿ. ಮಾಲತೇಶ್‌ರಾವ್ ಜಾಧವ್, ಮಾಜಿ ಅಧ್ಯಕ್ಷರು ನಗರಾಭಿವೃದ್ಧಿ ಪ್ರಾಧಿಕಾರ.
✦ ಅನಂತರಾಜ್, ರಿಯಲ್ ಎಸ್ಟೇಟ್ ✦ ಉದಯಕುಮಾರ್, ಸದಸ್ಯರು, ಮಹಾನಗರ ಪಾಲಿಕೆ ✦ ಚಂದ್ರಶೇಖರ್ ನಾಯ್ಕ

# ಆರೆಸ್ಸೆಸ್ ಸಂಸ್ಥೆಗಳಿಗೆ ನೂರಾರು ಎಕರೆ ಜಮೀನು: ಪರಿಶೀಲನೆ

ಬೆಂಗಳೂರು, ಜೂ. 9 - ಆರ್.ಎಸ್.ಎಸ್. ಹಾಗೂ ಬಿಜೆಪಿಗಳಿಗೆ ಸಂಬಂಧಿಸಿದ ಸಂಸ್ಥೆಗಳಿಗೆ ನೂರಾರು ಎಕರೆ ಜಮೀನು ನೀಡಲಾಗಿದೆ. ಈ ಬಗ್ಗೆ ಪರಿಶೀಲಿಸಲಾಗುವುದು ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹೇಳಿದರು.

ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಬಿಜೆಪಿ ಸರ್ಕಾರದ ಅವಧಿಯಲ್ಲಿ ರಾಜ್ಯ ಸರ್ಕಾರದ ನೂರಾರು ಎಕರೆ ಜಾಗವನ್ನು ಆರ್.ಎಸ್.ಎಸ್. ಹಾಗೂ ಸಂಘ ಪರಿವಾರದ ಸಂಘಟನೆಗಳಿಗೆ ನೀಡಲಾಗಿದೆ ಎಂದು ಹೇಳಿದರು.

ಈ ಸಂಘಟನೆಗಳು ಬೆಳೆಯಲು ಹಾಗೂ ಅವುಗಳ ಸಿದ್ಧಾಂತ ಬೆಳೆಸಲು ಜಮೀನು ನೀಡಲಾಗಿದೆ. ಈ ರೀತಿ ಜಮೀನು ನೀಡಿರುವ ಬಗ್ಗೆ ಪರಿಶೀಲಿಸಲಾಗುವುದು ಎಂದು ಹೇಳಿದರು.

॥ ಶ್ರೀ ಉಜ್ಜಿನಿ ಮರುಳಸಿದ್ದೇಶ್ವರ ಪ್ರಸನ್ನ ॥

ಶ್ರೀ ಮದುಜ್ಜಯಿನಿ ಸದ್ಧರ್ಮ ಸಿಂಹಾಸನಾಧೀಶ್ವರ ಶ್ರೀ ತರಳಬಾಳು ಜಗದ್ಗುರು
ಶ್ರೀ 1108 ಡಾ. ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳು
ತರಳಬಾಳು ಬೃಹನ್ಮಠ, ಸಿರಿಗೆರೆ ಇವರ ಕೃಪಾಶೀರ್ವಾದದೊಂದಿಗೆ,
ಪರಮಪೂಜ್ಯ ಶ್ರೀ ಶಿವಪ್ರಕಾಶ ಶಿವಾಚಾರ್ಯ ಮಹಾಸ್ವಾಮಿಗಳು
ಪಟ್ಟಾಧ್ಯಕ್ಷರು, ತರಳಬಾಳು ಶಾಖಾಮಠ, ಹರಳಕಟ್ಟ ಇವರ ದಿವ್ಯ ಸಾನ್ನಿಧ್ಯದಲ್ಲಿ

ದಿ॥ ಮೂಲೆಮನೆ ಶ್ರೀ ಎಂ.ಬಿ. ತಿಪ್ಪಣ್ಣನವರು
ನಿವೃತ್ತ ಅಡಿಷನಲ್ ಡೈರಕ್ಟರ್, ಟೌನ್‌ಪ್ಲಾನಿಂಗ್, ಕರ್ನಾಟಕ ಸರ್ಕಾರ, ಬೆಂಗಳೂರು ಇವರ
ಪ್ರಥಮ ವರ್ಷದ ಪುಣ್ಯ ಸ್ಮರಣೆ
ಶ್ರೀ ಎನ್. ಮಂಜುನಾಥ್ ಪ್ರಸಾದ್ ಐ.ಎ.ಎಸ್. ಪ್ರಧಾನ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ ಇವರಿಂದ
ಪುಸ್ತಕ ಬಿಡುಗಡೆ : 'ಬೆಳ್ಳಿಗನೂಡಿನ ಬೆಳಕು'
ವಚನ ಗಾಯನ: ಶ್ರೀಮತಿ ಯಶಾ ದಿನೇಶ್ ಹಾಗೂ ಕುಟುಂಬ ವರ್ಗದವರಿಂದ
ದಿನಾಂಕ : 10-06-2023ನೇ ಶನಿವಾರ, ಸಮಯ : ಬೆಳಿಗ್ಗೆ 11-00 ಕ್ಕೆ
ಸ್ಥಳ : ಶಾಮನೂರು ಶಿವಶಂಕರಪ್ಪ ಪಾರ್ವತಮ್ಮ ಸಮುದಾಯ ಭವನ (ಮಿನಿ ಹಾಲ್) ಹದಡಿ ರಸ್ತೆ, ದಾವಣಗೆರೆ.
ಇಂದ: ಶ್ರೀಮತಿ ಮಂಜುಳ ತಿಪ್ಪಣ್ಣ, ಕು॥ ಪವನ್ ಟಿ.ಎಂ. ಹಾಗೂ ಕುಟುಂಬ ವರ್ಗದವರು
ವಿ.ಸೂ. : ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿಸುತ್ತೇವೆ.

ಜಿ. ಮನೀಷ್ ನಿಧನ

ದಾವಣಗೆರೆ ಸಿಟಿ ಆಂಜನೇಯ ಬಡಾವಣೆ 18ನೇ ಕ್ರಾಸ್, ಡೋರ್ ನಂ. 1837/100, ಬಾಯ್ಸ್ ಹಾಸ್ಟೆಲ್ ಹಿಂಭಾಗದ ವಾಸಿ, ನಿವೃತ್ತ ಲೈನ್‌ಮ್ಯಾನ್ ಕೋಗುಂಡೆ ಕೆ.ಎನ್. ಸಿದ್ದಪ್ಪ ಇವರ ಮೊಮ್ಮಗ, ದಾವಣಗೆರೆ ಷುಗರ್ ಕಂಪನಿ ಇಂಜಿನಿಯರ್ ಎಸ್. ಗಿರೀಶ್ ಇವರ ಪುತ್ರ
ಚಿ॥ ಜಿ. ಮನೀಷ್ ಅವರು
ದಿನಾಂಕ 09-05-2023ರ ಶುಕ್ರವಾರ ಬೆಳಿಗ್ಗೆ ಅಕಾಲಿಕವಾಗಿ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ ಸುಮಾರು 23 ವರ್ಷ ವಯಸ್ಸಾಗಿತ್ತು. ಮೃತರು, ಅಜ್ಜ, ಅಜ್ಜಿ, ತಂದೆ, ತಾಯಿ ಮತ್ತು ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ. ಮೃತರ ಪಾರ್ಥಿವ ಶರೀರವನ್ನು ದಿನಾಂಕ 10-05-2023ರ ಶನಿವಾರ ಬೆಳಿಗ್ಗೆ 9 ಗಂಟೆಯವರೆಗೆ ದಾವಣಗೆರೆ ಆಂಜನೇಯ ಬಡಾವಣೆ, 18ನೇ ಕ್ರಾಸ್‌ನಲ್ಲಿರುವ ಸ್ವಗೃಹದಲ್ಲಿ ಸಾರ್ವಜನಿಕರ ಅಂತಿಮ ದರ್ಶನಕ್ಕಾಗಿ ಇರಿಸಲಾಗುವುದು. ನಂತರ ಬೆಳಿಗ್ಗೆ 10 ಗಂಟೆಗೆ ಭರಮಸಾಗರ ಹೋಬಳಿ ಕೋಗುಂಡೆ ಗ್ರಾಮದಲ್ಲಿರುವ ಜಮೀನಿನಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಗುವುದು.
ದುಃಖತಪ್ತ ಕುಟುಂಬ ವರ್ಗ
ಶ್ರೀಮತಿ ಶಿವರುದ್ರಮ್ಮ, ಕೆ.ಎನ್.ಸಿದ್ದಪ್ಪ ಮತ್ತು ಸಹೋದರರು ಮತ್ತು ಮಕ್ಕಳು, ಕೋಗುಂಡೆ ಗೌಡ್ರು ವಂಶಸ್ಥರು, ಕೋಗುಂಡೆ
ಶ್ರೀಮತಿ ನಾಗಮ್ಮ ದಿ॥ ನಂಜುಂಡಪ್ಪ ಮತ್ತು ಮಕ್ಕಳು ಹಾಗೂ ಕುರ್ಕಿ ಗೌಡ್ರು ವಂಶಸ್ಥರು, ಕುರ್ಕಿ.
ಮೊ. : 97406 42291, 99808 40624, 98865 96905

# ವಿಯಟ್ನಾಂನಲ್ಲಿ ನಾಳಿನ ಅಂತರ ರಾಷ್ಟ್ರೀಯ ಯೋಗ ಸ್ಪರ್ಧೆಗೆ ಆಯ್ಕೆ



ದಾವಣಗೆರೆ, ಜೂ.9- ವಿಯಟ್ನಾಂ ನ 'ಹೋಚಿಮಿನ್ ನಗರದ ವಿ ಯೋಗ ವರ್ಲ್ಡ್' ಯೋಗ ಸ್ಟುಡಿಯೋ ಮತ್ತು 'ಏವಿಯಾ' - ಅಷ್ಟಾಂಗ ವಿನ್ಯಾಸ ಅಂತರರಾಷ್ಟ್ರೀಯ ಯೋಗ ಅಕಾಡೆಮಿ ಮತ್ತು ನಮನ ಅಕಾಡೆಮಿ ವತಿಯಿಂದ ಫಸ್ಟ್ ಕಾನ್ಫರೆನ್ಸ್ ಸೆಂಟರ್‌ನಲ್ಲಿ ನಾಡಿದ್ದು ದಿನಾಂಕ 11 ರಂದು ವಿಶ್ವ ಯೋಗ ದಿನದ ಪ್ರಯುಕ್ತ ನಡೆಯಲಿರುವ ಅಂತರರಾಷ್ಟ್ರೀಯ ಯೋಗ ಟ್ಯಾಲೆಂಟ್ ಶೋ ಯೋಗ ಸ್ಪರ್ಧೆ ಹಾಗೂ ಕಲ್ಚರಲ್ ಎಕ್ಸ್‌ಚೇಂಜ್ ಕಾರ್ಯಕ್ರಮದಲ್ಲಿ ಭಾರತದ ರಾಷ್ಟ್ರಮಟ್ಟದ ಯೋಗ ಪಟು ಕು. ನೇಹ ಕೂರ್ಸೆ, ಚಿ. ಕು. ರಿಷಿಕ್ ಕೆ.ಎಸ್. ಸಾಗರ್, ಜ್ಯೋತಿಶ್ರೀ ಬಸವರಾಜ್, ಪಂಚಲಿಂಗಪ್ಪ ಕವಳೂರು, ಉಮೇಶ್ವರಯ್ಯ ಅಂತರರಾಷ್ಟ್ರೀಯ ಮಟ್ಟದ ಯೋಗ ಸ್ಪರ್ಧೆಗೆ ಆಯ್ಕೆಯಾಗಿ ಭಾರತದಿಂದ ಪ್ರತಿನಿಧಿಸುತ್ತಿದ್ದಾರೆ ಎಂದು ಭಾರತದ ಯೋಗ ಕೋಚ್ ತೀರ್ಥರಾಜ್ ಹೋಲೂರ್ ತಿಳಿಸಿದ್ದಾರೆ.

ಸ್ಥಳೀಯ ಡಾ.ಎಸ್.ಎಸ್. ನ್ಯಾಷನಲ್ ಪಬ್ಲಿಕ್ ಸ್ಕೂಲ್‌ನ ಆರನೇ ತರಗತಿ ವಿದ್ಯಾರ್ಥಿ ರಿಷಿಕ್ ಕೆ.ಎಸ್. ಸಾಗರ್ ಅಂತರರಾಷ್ಟ್ರೀಯ ಮಟ್ಟದಲ್ಲಿ ಆಯ್ಕೆಗೊಂಡಿರುವುದಕ್ಕೆ ಯೋಗ ಪರಿವಾರದ ಪ್ರಮುಖರು ಮತ್ತು ಕೈಗಾರಿಕಾ ಉದ್ಯಮಿಗಳಾದ ಎಸ್.ಎಸ್. ಗಣೇಶ್ ಮತ್ತು ಶಾಮನೂರು ಅಭಿಜಿತ್ ಮತ್ತು ಯೋಗ ಪರಿವಾರದ ಸದಸ್ಯರು ಅಭಿನಂದನೆಗಳನ್ನು ಸಲ್ಲಿಸಿದರು.

# ಕೆಲಸಗಳಲ್ಲಿ ವಿಳಂಬ ಧೋರಣೆ ಅನುಸರಿಸಿದರೆ ಭ್ರಷ್ಟಾಚಾರಕ್ಕೆ ಸಮ

**ಹರಪನಹಳ್ಳಿ ತಾಲ್ಲೂಕಿನ ಅರಸೀಕೆರೆ ಹೋಬಳಿಯ ಏಳು ಗ್ರಾಮ ಪಂಚಾಯಿತಿ ಮಟ್ಟದ ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳ (ಕೆಡಿಪಿ) ತ್ರೈಮಾಸಿಕ ಪ್ರಗತಿ ಪರಿಶೀಲನಾ ಸಭೆಯಲ್ಲಿ ಶಾಸಕ ದೇವೇಂದ್ರಪ್ಪ ವಿಶ್ಲೇಷಣೆ**

ಹರಪನಹಳ್ಳಿ, ಜೂ. 9 - ಸಾರ್ವಜನಿಕ ಕೆಲಸಗಳನ್ನು ವಿಳಂಬ ಮಾಡುವಾಗ ಧೋರಣೆ ಅನುಸರಿಸಿದರೆ ಭ್ರಷ್ಟಾಚಾರಕ್ಕೆ ಸಮವಾಗಲಿದ್ದು, ಆಡಳಿತ ಯಂತ್ರ ಕುಸಿಯದಂತೆ ಅಧಿಕಾರಿಗಳು ಜವಾಬ್ದಾರಿ ಯಿಂದ ಕೆಲಸ ಕಾರ್ಯಗಳನ್ನು ಮಾಡಬೇಕು ಎಂದು ಜಗಳೂರು ಶಾಸಕ ದೇವೇಂದ್ರಪ್ಪ ನಿರ್ದೇಶಿಸಿದರು.

ತಾಲ್ಲೂಕಿನ ಅರಸೀಕೆರೆ ಹೋಬಳಿಯ ಏಳು ಗ್ರಾಮ ಪಂಚಾಯಿತಿ ಮಟ್ಟದ ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳ (ಕೆಡಿಪಿ) ತ್ರೈಮಾಸಿಕ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಅಧಿಕಾರಿಗಳ ಮೇಲೆ ನನಗೆ ವಿಶ್ವಾಸವಿದೆ, ಸಾರ್ವಜನಿಕರ ಕೆಲಸಗಳಿಗೆ ಅಲೆದಾಡಿಸದೆ ಮಾಡಿಕೊಡಲು ಮುಕ್ತವಾಗಿ ಅವಕಾಶ ಮಾಡಿಕೊಡುವೆ. ಹರಪನಹಳ್ಳಿ, ಜಗಳೂರು, ದಾವಣಗೆರೆ ಮಧ್ಯೆ ಅರಸೀಕೆರೆ ಹೋಬಳಿ ವಿಭಿನ್ನವಾಗಿದ್ದು, ಇಲ್ಲಿನ ಅಭಿವೃದ್ಧಿ ಕೆಲಸ ಮಾಡಿಕೊಡಲು ಅಧಿಕಾರಿಗಳು ತಾರತಮ್ಯ ಮಾಡದೆ ಕೆಲಸ ಮಾಡಿಕೊಡಿ. ನಾವು, ನೀವು ಸೇರಿ ಅಭಿವೃದ್ಧಿ ಕಾರ್ಯಕ್ರಮಗಳ ಮೂಲಕ ಜನರಿಗೆ ಹತ್ತಿರವಾಗೋಣ ಎಂದು ಹೇಳಿದರು.

ಕೃಷಿ ಅಧಿಕಾರಿಯಿಂದ ಏಳು ಪಂಚಾಯಿತಿಗೆ ಸಂಬಂಧಿಸಿದ ಕೃಷಿ ಮಾಹಿತಿ ಪಡೆದ ಶಾಸಕರು ತಡವಾಗಿ ಮುಂಗಾರು ಆರಂಭವಾಗಿದ್ದು, ಕೃಷಿ ಚಟುವಟಿಕೆಗಳು ಚಾಲನೆ ದೊರೆತ್ತಿದೆ. ರೈತರಿಗೆ ಬೇಕಾದ ಬೀಜ, ಗೊಬ್ಬರ, ಔಷಧಿಗಳನ್ನು ಕೊರತೆಯಾಗದಂತೆ ಸಮರ್ಪಕವಾಗಿ ಪೂರೈಕೆ ಮಾಡಿ ಎಂದು ಕೃಷಿ ಅಧಿಕಾರಿ ಗೊಂದಿ ಮಂಜುನಾಥ ಇವರಿಗೆ ಸೂಚಿಸಿದರು.



ಜೂನ್‌ನಲ್ಲಿ ಶಾಲಾ-ಕಾಲೇಜು ಆರಂಭವಾಗಿವೆ. ಮಳೆಯು ಬರುವ ಮುನ್ಸೂಚನೆ ಇದ್ದು ಶೌಚಾಲಯ, ಕುಡಿಯುವ ನೀರು, ಮೂಲಸೌಕರ್ಯ, ಕೊಠಡಿಗಳು ದುರಸ್ಥಿ ಇದ್ದರೆ ಅವುಗಳ ಬಗ್ಗೆ ಎಚ್ಚರಿಕೆ ವಹಿಸಿ, ತಾ.ಪಂ. ಇಓ ಮೂಲಕ ಗ್ರಾಪಂ ಪಿಡಿಓಗಳಿಗೆ ದುರಸ್ಥಿ ಮಾಡಿಕೊಡುವಂತೆ ಸೂಚಿಸಿದರು. ನಂತರ ಶಾಲೆಯಲ್ಲಿ ಕೊರತೆ ಇರುವ ಖಾಲಿ ಇರುವ ಹುದ್ದೆಗಳ ಬಗ್ಗೆ ಮಾಹಿತಿ ಪಡೆದು, ಅತಿಥಿ ಶಿಕ್ಷಕರ ನೇಮಕಾತಿಯಲ್ಲಿ ಯಾವುದೇ ಮುಲಾಜಿಗೆ ಒಳಗಾಗದೆ ಪಾರದರ್ಶಕವಾಗಿ ನೇಮಕ ಮಾಡಿಕೊಳ್ಳಿ ಎಂದು ಬಿಇಓ ಬಸವರಾಜಪ್ಪನವರಿಗೆ ಹೇಳಿದರು.

ಅರಸೀಕೆರೆ ಭಾಗದಲ್ಲಿ ದೇವದಾಸಿ ಮಹಿಳೆಯರ ಸಂಖ್ಯೆ ಹೆಚ್ಚಿರುವ ಬಗ್ಗೆ ಶಾಸಕರ ಗಮನಕ್ಕೆ ಸಹಾಯಕ ನಿರ್ದೇಶಕರಾದ ರೇಣುಕಾದೇವಿ ಗಮನಕ್ಕೆ ತಂದಾಗ, ಶಾಸಕರು ವಸತಿ ನಿಲಯಗಳಲ್ಲಿ ಯಾವುದೇ ಅಹಿತಕರ ಘಟನೆಗಳು ಮರುಕಳಿಸದಂತೆ ನಿಲಯ ಮೇಲ್ವಿಚಾರಕರು, ಅಧಿಕಾರಿಗಳು ಎಚ್ಚರಿಕೆಯಿಂದ ಕೆಲಸ ನಿರ್ವಹಿಸಿ ಎಂದರು. ದೇವದಾಸಿ ಮಹಿಳೆಯರಿಗೆ ಭೂಮಿ ಸೇರಿದಂತೆ ಮೂಲಸೌಕರ್ಯ ಒದಗಿಸಿ ಎಂದು ಅಧಿಕಾರಿಗಳಿಗೆ ತಿಳಿಸಿದರು.

ಅರಸೀಕೆರೆ ವ್ಯಾಪ್ತಿಯಲ್ಲಿ 55 ಕಡೆಗಳಲ್ಲಿ ಜೆ.ಜೆ.ಎಂ. ಕಾಮಗಾರಿ ಪ್ರಗತಿಯಲ್ಲಿ 20 ಹಳ್ಳಿಗಳು ಬಾಕಿ ಇವೆ, ಬಹುಗ್ರಾಮ ಯೋಜನೆಯಲ್ಲಿ ಚಿಗಟೇರಿ ಮತ್ತು ಇತರೆ ಹಳ್ಳಿಗಳಲ್ಲಿ ಅರಸೀಕೆರೆ ವ್ಯಾಪ್ತಿಯ ಹಳ್ಳಿಗಳಿಗೂ ಕುಡಿಯುವ ನೀರನ್ನು ಒದಗಿಸುವ ಯೋಜನೆ ಗುತ್ತಿಗೆ ಹಂತದಲ್ಲಿದ್ದು, ಪೂರ್ಣಗೊಂಡ ಬಳಿಕ ಕಾಮಗಾರಿಗೆ ಚಾಲನೆ ನೀಡಲಾಗುವುದು ಎಂದು ಅಧಿಕಾರಿಗಳಿಂದ ಮಾಹಿತಿ ಪಡೆದು ಯಾವುದೇ ರೀತಿ ಕುಡಿಯುವ ನೀರಿನ ಸಮಸ್ಯೆಯಾಗದಂತೆ ಕ್ರಮವಹಿಸಿ ಎಂದರು.

> ಅರಸೀಕೆರೆ, ಉಚ್ಚಂಗಿದುರ್ಗ ಭಾಗದಲ್ಲಿ ಹೆಚ್ಚಿನ ಗಣಿಗಾರಿಕೆ ನಡೆಯುತ್ತಿದ್ದು, ಈ ಬಗ್ಗೆ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಅಧಿಕಾರಿ ಧರಣೇಶ್, ಮಂಜುನಾಥ ನೀಡಿದ ಮಾಹಿತಿಯಂತೆ ಒಟ್ಟು 60 ಕಲ್ಲು ಕ್ರಷರ್‌ಗಳು ಇದ್ದು, 50 ಕ್ರಷರ್‌ಗಳು ಕೆಲಸ ನಿರ್ವಹಿಸುತ್ತಿವೆ, 10 ಸ್ಥಗಿತಗೊಂಡಿವೆ. ರಸ್ತೆ ನಿಯಮ ಮೀರಿ ಹೆಚ್ಚಿನ ಸಾಗಣೆ ಮಾಡುತ್ತಿದ್ದು, ಅಲ್ಲದೆ ಕಲ್ಲು ಗಣಿಗಾರಿಕೆಯಿಂದ ಸ್ಥಳೀಯ ಗ್ರಾಮೀಣ ರಸ್ತೆಗಳು ಹಾಳಾಗುತ್ತಿವೆ ಈ ಬಗ್ಗೆ ಗಮನ ಹರಿಸಿ.
>
> -ದೇವೇಂದ್ರಪ್ಪ, ಶಾಸಕರು, ಜಗಳೂರು.

ಈ ಮಧ್ಯ ಬೆಸ್ಕಾಂ ಅಧಿಕಾರಿಗಳಾದ ಜಯ್ಯಪ್ಪ ಹಾಗೂ ವಿರುಪಾಕ್ಷಪ್ಪನವರು ಕೆರೆಗುಡಿಹಳ್ಳಿ ಗ್ರಾಮಕ್ಕೆ ಕಾನೂನು ನೋಡದೇ ನೀರನ್ನು ಒದಗಿಸಲು ಪ್ರಯತ್ನಿಸಿದರು. ಇದೇ ರೀತಿಯಾಗಿ ಎಲ್ಲಾ ಅಧಿಕಾರಿಗಳು ತುರ್ತು ಕೆಲಸಗಳಿಗೆ ಮುಂದಾಗಬೇಕು ಎಂದು ಅವರನ್ನು ಶ್ಲಾಘಿಸಿದರು.

ಅರಣ್ಯ ಇಲಾಖೆ, ಮೀನುಗಾರಿಕೆ, ರೇಷ್ಮೆ, ಕೆಆರ್‌ಡಿಎಲ್, ಕೈಗಾರಿಕೆ ಇಲಾಖೆ ಸೇರಿದಂತೆ ವಿವಿಧ ಇಲಾಖೆಗಳ ಪ್ರಗತಿಯ ಮಾಹಿತಿ ಪಡೆದರು.

ಈ ಸಂದರ್ಭದಲ್ಲಿ ಉಪವಿಭಾಗಾಧಿಕಾರಿ ಟಿ.ವಿ. ಪ್ರಕಾಶ್, ತಹಶೀಲ್ದಾರ್ ಶಿವಕುಮಾರ ಬಿರಾದಾರ, ತಾಪಂ ಇಓ ಕೆ.ಆರ್.ಪ್ರಕಾಶ್, ಎಇಇ ಸತೀಶ ಪಾಟೀಲ್, ನಾಗಪ್ಪ, ಕೆ.ಮಲ್ಲಪ್ಪ, ಪಲ್ಲಾಗಟ್ಟಿ ಶೇಖರಪ್ಪ, ಸೇರಿದಂತೆ ಇತರರು ಇದ್ದರು.

# ಚಿಟ್ಟಕ್ಕಿ ಶಾಲೆಯಲ್ಲಿ ಮಕ್ಕಳ ಕಲಿಕೆಗೆ ಪೂರಕ ವಾತಾವರಣ

**ಶಾಲಾ ಪ್ರಾರಂಭೋತ್ಸವ, ಅಕ್ಷರಾಭ್ಯಾಸ ಕಾರ್ಯಕ್ರಮದಲ್ಲಿ ಶ್ರೀ ಶಾರದೇಶಾನಂದ ಸ್ವಾಮೀಜಿ ಅಭಿಮತ**



ಮಲೇಬೆನ್ನೂರು, ಜೂ.9- ಮಕ್ಕಳು ಪ್ರತಿದಿನ ಶಾಲೆಗೆ ಆಸಕ್ತಿ ಮತ್ತು ಖುಷಿಯಿಂದ ಬರುವಂತಹ ವಾತಾವರಣ ಶಾಲೆಯಲ್ಲಿರಬೇಕೆಂದು ಹರಿಹರದ ರಾಮಕೃಷ್ಣ ವಿವೇಕಾನಂದ ಆಶ್ರಮದ ಶ್ರೀ ಸ್ವಾಮಿ ಶಾರದೇಶಾನಂದ ಮಹಾರಾಜ್ ಹಿತ ನುಡಿದರು.

ಕುಂಬಳೂರು ಬಳಿ ಇರುವ ಚಿಟ್ಟಕ್ಕಿ ಇಂಟರ್‌ನ್ಯಾಷನಲ್ ಶಾಲೆಯ ಪ್ರಾರಂಭೋತ್ಸವದ ಅಂಗವಾಗಿ ಇಂದು ಹಮ್ಮಿಕೊಂಡಿದ್ದ ಶಾರದ ಪೂಜೆ ಹಾಗೂ ಅಕ್ಷರಾಭ್ಯಾಸ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿ ಶ್ರೀಗಳು ಆಶೀರ್ವಚನ ನೀಡಿದರು.

ಶಾಲೆಗಳಲ್ಲಿ ಕಲಿಕೆ ವಿಧಾನ ಸರಳವಾಗಿರಬೇಕು. ಮಕ್ಕಳಿಗೆ ಪ್ರತಿನಿತ್ಯ ಪ್ರಾರ್ಥನೆ, ಧ್ಯಾನ ಮಾಡಿಸಬೇಕು. ನೈತಿಕ ಶಿಕ್ಷಣಕ್ಕೆ ಒತ್ತು ಕೊಡಿ ಎಂದು ಶಿಕ್ಷಕರಿಗೆ ತಿಳಿಸಿದರು.

ಟಿವಿ, ಮೊಬೈಲ್‌ಗಳಿಂದ ಪೋಷಕರು, ಶಿಕ್ಷಕರೂ ದೂರವಿದ್ದು, ಮಕ್ಕಳನ್ನೂ ದೂರ ಇರಬೇಕು. ಮಕ್ಕಳು ಇತ್ತೀಚಿಗೆ ಮೊಬೈಲ್ ಅನ್ನು ಅತಿಯಾಗಿ ಬಳಸುತ್ತಿದ್ದು, ಇದರಿಂದ ಕಲಿಗೆ ಹಾಗೂ ಆರೋಗ್ಯದ ಮೇಲೂ ಪರಿಣಾಮ ಬೀರುವ ಸಾಧ್ಯತೆ ಇದೆ ಎಂದು ಸ್ವಾಮೀಜಿ ಎಲ್ಲರನ್ನೂ ಎಚ್ಚರಿಸಿದರು.

ಮಕ್ಕಳ ಎದುರು ತಂದೆ-ತಾಯಿಗಳು ಗಂಡ-ಹೆಂಡತಿ ಆಗದೆ, ತಂದೆ-ತಾಯಿಗಳಾಗಿ ಪ್ರೀತಿ ತೋರಿಸಿ ಎಂದು ಕಿವಿಮಾತು ಹೇಳಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ವಿದ್ಯಾಸಂಸ್ಥೆಯ ಆಡಳಿತಾಧಿಕಾರಿ ಎಸ್.ಕೆ. ಕುಮಾರ್ ಅವರು, ಪೋಷಕರ ನಿರೀಕ್ಷೆಯಂತೆ ಮಕ್ಕಳಲ್ಲಿ ಬಹಳ ಬೇಗ ಬದಲಾವಣೆ ತರುವ ಪ್ರಯತ್ನದಲ್ಲಿ ನಾವಿದ್ದೇವೆ. ನಾವು ಈ ವರ್ಷ ಎಲ್‌ಕೆಜಿಯಿಂದ ಏಳನೇ ತರಗತಿವರೆಗೆ ತರಗತಿ ಆರಂಭಿಸಿದ್ದೇವೆ. ಮುಂದಿನ ವರ್ಷ ಹತ್ತನೇ ತರಗತಿವರೆಗೆ ಮುಂದುವರಿಸುತ್ತೇವೆ ಎಂದರು.

ವಿದ್ಯಾಸಂಸ್ಥೆಯ ಕಾರ್ಯದರ್ಶಿ ಹಾಗೂ ಪುರಸಭೆ ಮಾಜಿ ಸದಸ್ಯ ಮಹಾಂತೇಶ್ ಸ್ವಾಮಿ, ಸಂಸ್ಥೆಯ ಟ್ರಸ್ಟಿ ಶ್ರೀಮತಿ ಸುಧಾ ರಮೇಶ್, ಶಾಲೆಯ ಪ್ರಾಂಶುಪಾಲ ಚೇತನ್‌ಕುಮಾರ್ ವೇದಿಕೆಯಲ್ಲಿದ್ದರು.

ಆರನೇ ತರಗತಿ ವಿದ್ಯಾರ್ಥಿನಿ ಚಿರಡೋಣಿಯ ಎಸ್.ರಾಜಲಕ್ಷ್ಮಿ ಭಗವದ್ಗೀತೆಯ ಶ್ಲೋಕ ಪಾರಾಯಣ ಮಾಡಿ, ಎಲ್ಲರ ಗಮನ ಸೆಳೆದರು.

ಶಿಕ್ಷಕಿಯರಾದ ಅಂಜನಾ ಸ್ವಾಗತಿಸಿದರು. ಅಖಿಲೇಶ್ವರಿ ನಿರೂಪಿಸಿದರೆ, ಶಶಿಕುಮಾರಿ ವಂದಿಸಿದರು.

# ಅಂಚೆ ಕಚೇರಿಯಲ್ಲಿ ಲೈಂಗಿಕ ಕಿರುಕುಳ ತಡೆ ಕಾಯ್ದೆ ಕಾರ್ಯಾಗಾರ



ದಾವಣಗೆರೆ, ಜೂ. 9- ಕೆಲಸದ ಸ್ಥಳದಲ್ಲಿ ಮಹಿಳೆಯರ ಮೇಲಿನ ಲೈಂಗಿಕ ಕಿರುಕುಳ ತಡೆ ಕಾಯ್ದೆ 2013 ಕುರಿತು ನಗರದ ಪ್ರಧಾನ ಅಂಚೆ ಕಚೇರಿಯಲ್ಲಿ ಕಾರ್ಯಾಗಾರವನ್ನು ನಡೆಸಲಾಯಿತು. ವಕೀಲರಾದ ಸಿ.ಪಿ. ಅನಿತಾ ಅವರು ಕಾಯಿದೆಯ ನಿಬಂಧನೆಗಳನ್ನು ವಿವರಿಸಿದರು. ಇದೇ ವೇಳೆ ಸಿ.ಪಿ. ಅನಿತಾ ಅವರ ಭಾವಚಿತ್ರವಿರುವ ಮೈ ಸ್ಟಾಂಪ್ ಅಂಚೆ ಚೀಟಿಯನ್ನು ನೀಡುವ ಮೂಲಕ ದಾವಣಗೆರೆ ವಿಭಾಗದ ಅಂಚೆ ಅಧೀಕ್ಷಕ ಚಂದ್ರಶೇಖರ್ ಹಾಗೂ ಅಂಚೆ ಸಹಾಯಕ ಅಧೀಕ್ಷಕರಾದ ಗುರುಪ್ರಸಾದ್ ಅವರು ಸನ್ಮಾನಿಸಿದರು.

## ಹಿಂಡಸಘಟ್ಟದಲ್ಲಿ ಹುಲ್ಲಿನ ಬಣವೆಗೆ ಬೆಂಕಿ

ಮಲೇಬೆನ್ನೂರು, ಜೂ.9- ಹಿಂಡಸ ಘಟ್ಟ ಗ್ರಾಮದಲ್ಲಿ ಬುಧವಾರ ರಾತ್ರಿ ಆಕಸ್ಮಿಕ ಬೆಂಕಿ ಬಿದ್ದು, ಸುಮಾರು 45 ಸಾವಿರ ರೂ. ಮೌಲ್ಯದ 5 ಲೋಡ್ ಭತ್ತದ ಹುಲ್ಲಿನ ಬಣವೆ ಸುಟ್ಟು ಭಸ್ಮವಾಗಿದೆ. ಗ್ರಾಮದ ಇಂದ್ರಮ್ಮ ಮಹೇಶ್ವರಪ್ಪ ಅವರಿಗೆ ಸೇರಿದ ಹುಲ್ಲಿನ ಬಣವೆ ಇದಾಗಿದ್ದು, ಬೆಂಕಿ ಬಿದ್ದ ತಕ್ಷಣ ಗ್ರಾಮಸ್ಥರು ದಾವಿಸಿ, ಬೆಂಕಿ ನಂದಿಸಲು ಹರಸಾಹಸ ಪಟ್ಟರು. ಅಗ್ನಿ ಶಾಮಕ ದಳದವರು ಆಗಮಿಸಿ, ಬೆಂಕಿ ನಂದಿಸಿ, ಹೆಚ್ಚಿನ ಅನಾಹುತ ತಪ್ಪಿಸಿದರು. ಮಹೇಶ್ವರಪ್ಪ ಈ ಹುಲ್ಲನ್ನು ಖರೀದಿಸಿದ್ದರು ಎನ್ನಲಾಗಿದೆ. ಕಳೆದ ವಾರ ಹಾಲಿವಾಣ ಗ್ರಾಮದಲ್ಲೂ ಆಕಸ್ಮಿಕ ಬೆಂಕಿ ಬಿದ್ದು, 50 ಲೋಡ್ ಹುಲ್ಲಿನ ಬಣವೆಗಳು ಭಸ್ಮವಾಗಿದ್ದವು.

# ಶೇ.35.5ರಷ್ಟು ಜನರಿಗೆ ರಕ್ತದೊತ್ತಡ



ನವದೆಹಲಿ, ಜೂ. 9 - ಭಾರತದಲ್ಲಿ ಶೇ.11.4ರಷ್ಟು ಜನರು ಸಕ್ಕರೆ ಕಾಯಿಲೆ ಹಾಗೂ ಶೇ.35.5ರಷ್ಟು ಜನರು ರಕ್ತದೊತ್ತಡದಿಂದ ಬಳಲುತ್ತಿದ್ದಾರೆ ಎಂದು ದಿ ಲ್ಯಾನ್ಸೆಟ್ ಡಯಾಬಿಟಿಸ್ ಅಂಡ್ ಎಂಡೋಕ್ರೈನಾಲಜಿ ನಿಯತಕಾಲಿಕ ನಡೆಸಿದ ಸಮೀಕ್ಷೆಯಲ್ಲಿ ತಿಳಿಸಲಾಗಿದೆ.

2021ರಲ್ಲಿ ಈ ಸಮೀಕ್ಷೆ ನಡೆಸಲಾಗಿತ್ತು. ಇದರ ಪ್ರಕಾರ ಭಾರತದಲ್ಲಿ 10 ಕೋಟಿ ಜನರು ಸಕ್ಕರೆ ಕಾಯಿಲೆಯಿಂದ ಬಳಲುತ್ತಿದ್ದಾರೆ. 13.6 ಕೋಟಿ ಜನರು ಸಕ್ಕರೆ ಕಾಯಿಲೆ ಹೊಸ್ತಿಲ ಹಂತದಲ್ಲಿದ್ದಾರೆ ಮತ್ತು 31.5 ಕೋಟಿ ಜನರು ಹೆಚ್ಚಿನ ರಕ್ತದೊತ್ತಡದ ಸಮಸ್ಯೆ ಎದುರಿಸುತ್ತಿದ್ದಾರೆ.

ಮದ್ರಾಸ್ ಡಯಾಬಿಟಿಸ್ ರೀಸರ್ಚ್ ಫೌಂಡೇಷನ್ ಹಾಗೂ ಇಂಡಿಯನ್ ಕೌನ್ಸಿಲ್ ಆಫ್ ಮೆಡಿಕಲ್ ರೀಸರ್ಚ್‌ಗಳ ಸಂಯುಕ್ತಾಶ್ರಯದಲ್ಲಿ ಸಮೀಕ್ಷೆ ನಡೆಸಲಾಗಿತ್ತು. ಈ ಸಮೀಕ್ಷೆಗೆ ಕೇಂದ್ರ ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ಸಚಿವಾಲಯ ಅನುದಾನ ಒದಗಿಸಿತ್ತು.

ಬೇರೆ ಬೇರೆ ರಾಜ್ಯಗಳಲ್ಲಿ ಸಕ್ಕರೆ ಕಾಯಿಲೆ ಬೇರೆ ಬೇರೆ ಹಂತಗಳಲ್ಲಿದೆ. ಕೆಲ ರಾಜ್ಯಗಳಲ್ಲಿ ಸಕ್ಕರೆ ಕಾಯಿಲೆ ಈಗಾಗಲೇ ಗರಿಷ್ಠ ಹಂತದಲ್ಲಿದೆ. ಮುಂದಿನ 3-5 ವರ್ಷಗಳಲ್ಲಿ ಕೆಲ ರಾಜ್ಯಗಳಲ್ಲಿ ಗರಿಷ್ಠ ಹಂತಕ್ಕೆ ಬರಲಿದೆ ಎಂದು ಸಮೀಕ್ಷೆ ಹೇಳಿದೆ.

## ಮರು ಪರಿಶೀಲನೆ

(1ನೇ ಪುಟದಿಂದ) ಕೈಗೆತ್ತಿಕೊಂಡಿರುವ ತೀರ್ಮಾನಗಳನ್ನು ಮಾತ್ರ ಪರಿಶೀಲಿಸುವುದಾಗಿ ಭೈರೇಗೌಡರು ಸ್ಪಷ್ಟಪಡಿಸಿದರು.

ಭೂ ಸ್ವಾಧೀನ ನ್ಯಾಯಯೋಚಿತ ಪರಿಹಾರ ಮತ್ತು ಪಾರ ದರ್ಶಕತೆ ಹಕ್ಕು ಕಾಯ್ದೆ 2013 ಮತ್ತು ಭೂ ಸುಧಾರಣೆ ಕಾಯ್ದೆಗಳ ತಿದ್ದುಪಡಿ ಬಗ್ಗೆ ಮತ್ತೆ ಪರಿಶೀಲನೆ ಮಾಡುವುದಾಗಿಯೂ ತಿಳಿಸಿದರು. ಹಿಂದಿನ ಬಿಜೆಪಿ ಸರ್ಕಾರ ಈ ಕಾಯ್ದೆಗೆ ತಿದ್ದುಪಡಿ ತಂದು ಪ್ರಮುಖ ಸೆಕ್ಷನ್ ಗಳನ್ನು ಕಿತ್ತು ಹಾಕಿ ಸುಗ್ರೀವಾಜ್ಞೆ ಮೂಲಕ ಕಾಯ್ದೆ ಜಾರಿಗೊಳಿಸಿದ್ದಾರೆ ಎಂದು ಹೇಳಿದರು.

ಇದರಿಂದ ವಿವಿಧ ನ್ಯಾಯಾಲಯಗಳ ಮುಂದೆ ಇತ್ಯರ್ಥವಾಗದೇ ಉಳಿದಿದ್ದ 12, 231 ಭೂ ಖರೀದಿಯ ಅಕ್ರಮ ಪ್ರಕರಣಗಳು ರಾತ್ರಿ ಕಳೆದು ಬೆಳಗಾಗುವುದರಲ್ಲಿ ಸಕ್ರಮವಾಗಿವೆ ಎಂದು ಟೀಕಿಸಿದರು.

ರೈತರ ಜಮೀನನ್ನು ಉಳ್ಳವರು ಕಬಳಿಸಲು ಅನುಕೂಲವಾಗುವಂತೆ ಕಾಯ್ದೆಗೆ ತಿದ್ದುಪಡಿ ಮಾಡಲಾಗಿದೆ. ಭೂಮಿ ಕೊಳ್ಳುವವರ ದಾಳಿ ಹೆಚ್ಚಾಗಿ ರೈತರು ಭೂಮಿ ಮಾರಾಟ ಮಾಡುವ ಒತ್ತಡಕ್ಕೆ ಒಳಗಾಗಿದ್ದಾರೆ.

ಭೂಮಿ ಕೊಳ್ಳಲು ಯಾವುದೇ ನಿರ್ಬಂಧವಿಲ್ಲದ ಕಾರಣ, ಗ್ರಾಮಗಳಲ್ಲಿ ಭೂ ರಹಿತರೇ ಹೆಚ್ಚಾಗುತ್ತಿದ್ದು, ಮುಂದಿನ ದಿನಗಳಲ್ಲಿ ಆಹಾರದ ಅಭದ್ರತೆ ಹೆಚ್ಚಾಗಲಿದೆ ಎಂದು ತಿಳಿಸಿದರು.

## ಗ್ಯಾರಂಟಿ ಷರತ್ತು ಮತ್ತೆ ಬದಲಾವಣೆ

(1ನೇ ಪುಟದಿಂದ) ಉದ್ಘಾಟನೆ ಮಾಡಲಾಗುತ್ತದೆ. ಆಗಸ್ಟ್ 17 ಅಥವಾ ಆಗಸ್ಟ್ 18 ರಂದು ಬೆಳಗಾವಿಯಲ್ಲಿ ಈ ಕಾರ್ಯಕ್ರಮ ನಡೆಸಲು ಉದ್ದೇಶಿಸಲಾಗಿದೆ ಎಂದವರು ತಿಳಿಸಿದ್ದಾರೆ.

# ಬಡ ಜನತೆಯ ಕಷ್ಟ ಸುಖಗಳಿವಗೆ ಯಾರು ಸ್ಪಂದಿಸುತ್ತಾರೋ, ಅಂತವರಿಗೆ ಬೆಂಬಲ

**ಹರಪನಹಳ್ಳಿ ಶಾಸಕರಾದ ಎಂ.ಪಿ. ಲತಾ ಮಲ್ಲಿಕಾರ್ಜುನ್**

ಹರಪನಹಳ್ಳಿ,ಜೂ. 9 - ಬಡ ಹಾಗೂ ಜನಸಾಮಾನ್ಯ ಕಕ್ಷಿದಾರರನ್ನು ವಿನಾಕಾರಣ ಅಲೆದಾಡಿಸದೆ ಅವರಿಗೆ ತ್ವರಿತವಾಗಿ ನ್ಯಾಯವನ್ನು ಕೊಡಿಸುವ ಕೆಲಸವನ್ನು ವಕೀಲರು ಮಾಡಬೇಕು ಎಂದು ಶಾಸಕರಾದ ಎಂ.ಪಿ. ಲತಾ ಮಲ್ಲಿಕಾರ್ಜುನ್ ಹೇಳಿದರು.

ಪಟ್ಟಣದ ನ್ಯಾಯಾಲಯದ ಆವರಣದಲ್ಲಿರುವ ವಕೀಲರ ಸಂಘದ ಕಚೇರಿಯಲ್ಲಿ ತಾಲ್ಲೂಕು ವಕೀಲರ ಸಂಘದಿಂದ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, ತಾಲ್ಲೂಕಿನ ಬಡ ಜನತೆಯ ಕಷ್ಟ-ಸುಖಗಳಿಗೆ ಯಾರು ಸ್ಪಂದಿಸುತ್ತಾರೋ, ಅಂತವರಿಗೆ ನನ್ನ ಸಂಪೂರ್ಣ ಬೆಂಬಲವಿದೆ ಎಂದರು.



ನಮ್ಮ ತಂದೆ ಎಂ.ಪಿ. ಪ್ರಕಾಶ್ ಅವರೂ ಸಹ ವಕೀಲ ವೃತ್ತಿಯಿಂದ ಜೀವನ ಆರಂಭಿಸಿ ರಾಜಕೀಯ, ಸಾಂಸ್ಕೃತಿಕವಾಗಿ ಅಭಿವೃದ್ಧಿಗೆ ಸಹಕರಿಸಿದ್ದಾರೆ. ಅದೇ ರೀತಿಯಾಗಿ ನಾನು ನಿಮ್ಮ ಬೆಂಬಲಕ್ಕೆ ಇರುತ್ತೇನೆ ಎಂದ ಅವರು ನೂತನ ನ್ಯಾಯಾಲಯ ಕಟ್ಟಡ ನಿರ್ಮಾಣ ಪ್ರಗತಿಯಲ್ಲಿದ್ದು, ರಸ್ತೆ ಮತ್ತು ಕುಡಿಯುವ ನೀರಿನ ಬೇಡಿಕೆಯನ್ನು ಶೀಘ್ರವೇ ಈಡೇರಿಸಲಾಗುವುದು.

ಇದರ ಜೊತೆಗೆ ಉಳಿದ ನಿಮ್ಮ ಬೇಡಿಕೆಗಳನ್ನು ಹಂತ ಹಂತವಾಗಿ ಮಾಡಿಕೊಡುವುದಾಗಿ ಭರವಸೆ ನೀಡಿದರು..

ವಕೀಲರ ಸಂಘದ ಅಧ್ಯಕ್ಷ ಎಂ.ಅಜ್ಜಣ್ಣ ಮಾತನಾಡಿ, ನ್ಯಾಯಾಲಯವು ಸುಸಜ್ಜಿತವಾಗಿ ನಿರ್ಮಾಣವಾಗುತ್ತಿದೆ, ಅದಕ್ಕೆ ಬೇಕಾಗುವ ಎಲ್ಲಾ ರೀತಿಯ ಮೂಲಸೌಕರ್ಯಗಳನ್ನು ಒಳಗೊಂಡು ವಿವಿಧ ಬೇಡಿಕೆಗಳನ್ನು ಈಡೇರಿಸಬೇಕು ಎಂದು ಶಾಸಕರಿಗೆ ಮನವಿ ಮಾಡಿದರು.

ಈ ಸಂದರ್ಭದಲ್ಲಿ ವಕೀಲರ ಸಂಘದ ಉಪಾಧ್ಯಕ್ಷ ಕೆ.ವೀರುಪಾಕ್ಷಪ್ಪ, ಕಾರ್ಯದರ್ಶಿ ಕೆ.ಆನಂದ ವಕೀಲರಾದ ಕೆ.ಚಂದ್ರೇಗೌಡ, ಕೆ. ಜಗದಪ್ಪ, ಟಿ.ವೆಂಕಟೇಶ್, ಡಿ.ಅಬ್ದುಲ್‌ರೆಹಮಾನ್, ಪಿ.ಜಗದೀಶ ಗೌಡ, ಕೋಡಿಹಳ್ಳಿ ಪ್ರಕಾಶ, ವಿಜಿ.ಪ್ರಕಾಶಗೌಡ, ಕೆ.ಲಿಂಗಾನಂದ, ಹಾಲನಗೌಡ, ಪಿ.ರಾಮನಗೌಡ, ಟಿ.ಎಚ್. ಎಂ.ಮಂಜುನಾಥ, ವಾಮದೇವ ಕಮ್ಮತ್ತಹಳ್ಳಿ, ಡಿ.ಹನುಮಂತ, ಕೆ.ದ್ರಾಕ್ಷಾಯಣಮ್ಮ, ಜೆ. ಸೀಮಾ, ಕೊಟ್ರೇಶ, ರೇಣುಕಾ ಮೇಟಿ, ತಿರುಪತಿ, ಕೆಂಗಳ್ಳಿ ಪ್ರಕಾಶ ಸೇರಿದಂತೆ ಇತರರು ಇದ್ದರು.

## 17ನೇ ವಾರ್ಷಿಕ ಪುಣ್ಯಸ್ಮರಣೆ



ಬಿ. ಕೋಗಾಚಾರ್
(ಮರಣ : 10-06-2006)



ಶ್ರೀಮತಿ ಲೀಲಾವತಿ ಕೋಗಾಚಾರ್
(ಮರಣ: 9.2.2006)

ಹುಟ್ಟುವಾಗ ಉಸಿರಿತ್ತು ಹೆಸರಿರಲಿಲ್ಲ.
ಸಾಯುವಾಗ ಹೆಸರಿತ್ತು ಉಸಿರು ಇರಲಿಲ್ಲ.
ಹುಟ್ಟು-ಸಾವುಗಳ ನಡುವೆ ನೀವು ಬಿಟ್ಟು
ಹೋದ ಆದರ್ಶಗಳೇ ನಮಗೆ ದಾರಿದೀಪ

ಅಗಲಿದ ನಿಮ್ಮ ದಿವ್ಯಾತ್ಮಕ್ಕೆ ಭಗವಂತನಲ್ಲಿ ಸದಾ ಚಿರಶಾಂತಿಯನ್ನು ಪ್ರಾರ್ಥಿಸುವ ಮಕ್ಕಳಾದ

ರವಿಚಂದ್ರ ಬಿ.ಕೋಗಾಚಾರ್ ಆಭರಣ ತಯಾರಕರು,
ಕಾಯಿಪೇಟೆ, ದಾವಣಗೆರೆ. ಮೊ. 98443 28445

## ನಿವೃತ್ತ ಶಿಕ್ಷಕಿ ಎಸ್.ಎ ಇಂದ್ರಮ್ಮ ನಿಧನ



ದಾವಣಗೆರೆ ಎಸ್.ಎಸ್. ಲೇಔಟ್, ಎಸ್.ಎಸ್ ಮಾಲ್ ಹಿಂಭಾಗದ ವಾಸಿ,
ದಿ. ಕೆ. ದೇವೇಂದ್ರಪ್ಪ ಇವರ ಧರ್ಮಪತ್ನಿ

**ಎಸ್.ಎ. ಇಂದ್ರಮ್ಮ**

ಇವರು, ದಿನಾಂಕ 09.06.2023ರ ಶುಕ್ರವಾರ ಸಂಜೆ 6.20 ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 75 ವರ್ಷ ವಯಸ್ಸಾಗಿತ್ತು. ಓರ್ವ ಪುತ್ರ, ಸೊಸೆ, ಮೊಮ್ಮಗಳು ಹಾಗೂ ಅಪಾರ ಬಂಧು ಬಳಗವನ್ನು ಅಗಲಿರುತ್ತಾರೆ. ದಿನಾಂಕ 10.6.2023ರ ಶನಿವಾರ ಮಧ್ಯಾಹ್ನ12ರವರೆಗೆ ಮೃತರ ಪಾರ್ಥಿವ ಶರೀರವನ್ನು ನಗರದ ಎಸ್.ಎಸ್. ಲೇಔಟ್‌ನ ನಿವಾಸದಲ್ಲಿ ಅಂತಿಮ ದರ್ಶನಕ್ಕೆ ಇಡಲಾಗುವುದು. ನಂತರ ಅಂತ್ಯಕ್ರಿಯೆಯನ್ನು ಮಧ್ಯಾಹ್ನ 2 ಕ್ಕೆ ಕತ್ತಲಗೆರೆ ಗ್ರಾಮದಲ್ಲಿ ನೆರವೇರಿಸಲಾಗುವುದು.

**ದುಃಖತಪ್ತ ಕುಟುಂಬದವರು, ಮೊ : 98440 01686**

## ಎಸ್ಸೆಸ್ಸೆಂಗೆ ಜಿಲ್ಲಾ ಉಸ್ತುವಾರಿ

(1ನೇ ಪುಟದಿಂದ) ರಾಯಚೂರು, ಆರ್.ಬಿ.ತಿಮ್ಮಾಪೂರ್ - ಬಾಗಲಕೋಟೆ, ಶಿವರಾಜ್ ತಂಗಡಗಿ - ಕೊಪ್ಪಳ, ಡಿ.ಸುಧಾಕರ್ - ಚಿತ್ರದುರ್ಗ, ಬಿ.ನಾಗೇಂದ್ರ - ಬಳ್ಳಾರಿ, ಬಿ.ಎಸ್.ಸುರೇಶ್ - ಕೋಲಾರ, ಲಕ್ಷ್ಮೀ ಹೆಬ್ಬಾಳ್ಕರ್ - ಉಡುಪಿ, ಮಂಕಾಳ ವೈದ್ಯ - ಉತ್ತರ ಕನ್ನಡ, ಮಧುಬಂಗಾರಪ್ಪ - ಶಿವಮೊಗ್ಗ, ಡಾ. ಎಂ.ಸಿ. ಸುಧಾಕರ್ - ಚಿಕ್ಕಬಳ್ಳಾಪುರ.

## ಚನ್ನಗಿರಿಯಲ್ಲಿ ನಾಳೆ ಆಕಾಶ್ ಬೈಜೂಸ್ ತರಬೇತಿ ಕೇಂದ್ರದಿಂದ ಉಚಿತ ಕಾರ್ಯಾಗಾರ

ಚನ್ನಗಿರಿ, ಜೂ. 9- ನಗರದ ಆಕಾಶ್ ಬೈಜೂಸ್ ತರಬೇತಿ ಕೇಂದ್ರದ ವತಿಯಿಂದ ನಾಡಿದ್ದು ದಿನಾಂಕ 11ರ ಬೆಳಿಗ್ಗೆ 11 ರಿಂದ 12.30ರವರೆಗೆ ಚನ್ನಗಿರಿ ಜ್ಞಾನದೀಪ ಎಕ್ಸ್‌ಪರ್ಟ್ ಪಿಯು ಕಾಲೇಜಿನ ಸಭಾಂಗಣದಲ್ಲಿ ಉಚಿತ ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಗಿದೆ. ವಿವರಕ್ಕೆ ಸಂಪರ್ಕಿಸಿ : 92892 52001, 92890 54591.

### ಹರಿಹರದ ಹನುಮಂತಪ್ಪ ಗುತ್ತಲ್ (ಚಾದಂಗಡಿ) ನಿಧನ



ಹರಿಹರ ನಗರದ ನೀಲಕಂಠಪ್ಪ ಬಿಲ್ಡಿಂಗ್, ಲತಾ ಇಂಟರ್‌ನೆಟ್ ನಡುವಲಪೇಟೆ ವಾಸಿ ಪಟ್ಟಸಾಲಿ ಸಮಾಜದ ಅಧ್ಯಕ್ಷರು, ರಚನಾ ಕ್ರೀಡಾ ಉಪಾಧ್ಯಕ್ಷರಾದ ಹನುಮಂತಪ್ಪ ಗುತ್ತಲ್ ಚಾದಂಗಡಿ ಇವರು, ದಿನಾಂಕ 09.06.2023ರ ಶುಕ್ರವಾರ ರಾತ್ರಿ 11 ಕ್ಕೆ ನಿಧನರಾದರು. ಪತ್ನಿ, ಇಬ್ಬರು ಪುತ್ರರು, ಓರ್ವ ಪುತ್ರಿ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 10.6.2023ರ ಶನಿವಾರ ಮಧ್ಯಾಹ್ನ 2.30ಕ್ಕೆ ಹರಿಹರದ ರುದ್ರಭೂಮಿಯಲ್ಲಿ ನೆರವೇರಲಿದೆ.

## ಗುಳ್ಳೆಹಳ್ಳಿ ಬಳಿ ರಸ್ತೆ ಅಪಘಾತ : ಸಾವು

ಚನ್ನಗಿರಿ, ಜೂ.9- ಮುಂದೆ ಹೋಗುತ್ತಿದ್ದ ಟಿವಿಎಸ್ ಎಕ್ಸೆಲ್ ವಾಹನ ದಿಢೀರ್ ಬ್ರೇಕ್ ಹಾಕಿದ ಪರಿಣಾಮ ಹಿಂದೆ ಬೈಕ್‌ನಲ್ಲಿ ಬರುತ್ತಿದ್ದ ವ್ಯಕ್ತಿ ಡಿಕ್ಕಿ ಹೊಡೆದು, ಬೈಕ್ ನಿಂದ ನೆಲಕ್ಕೆ ಬಿದ್ದ ವ್ಯಕ್ತಿಯ ಮೇಲೆ ಬೇರೊಂದು ಬೈಕು ಹತ್ತಿ ಬಿದ್ದ ವ್ಯಕ್ತಿ ಮೃತಪಟ್ಟ ಘಟನೆ ಚನ್ನಗಿರಿ ತಾಲ್ಲೂಕು ಗುಳ್ಳೆಹಳ್ಳಿ ಗ್ರಾಮದ ಬಸ್ ನಿಲ್ದಾಣದ ಬಳಿ ನಡೆದಿದೆ.

ಹಿರೇಉಡ ತಾಂಡಾದ ಆಂಜನೇಯ ಎಸ್. (32) ಮೃತ ವ್ಯಕ್ತಿಯಾಗಿದ್ದು, ಮೃತನ ಪತ್ನಿ ಚನ್ನಗಿರಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

## ಜಗಳೂರು : ಸಿಡಿಲು ಬಡಿದು ಇಬ್ಬರ ಸಾವು



(1ನೇ ಪುಟದಿಂದ) ಪಾರಾಗಿದ್ದಾರೆ. ಸಂಜೆ ತಾಲ್ಲೂಕಿನ ಅಣಬೂರು, ಕ್ಯಾಸೇನಹಳ್ಳಿ, ದೊಣೆಹಳ್ಳಿ, ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗ್ರಾಮಗಳ ವ್ಯಾಪ್ತಿಯಲ್ಲಿ ಬಿರುಗಾಳಿ ಸಹಿತ ಗುಡುಗು, ಸಿಡಿಲಿನ ಮಳೆಯಾಗಿದ್ದು ಹಲವಾರು ಚೆಕ್ ಡ್ಯಾಮ್ ಗಳು, ಹೊಲಗಳು, ಕಟ್ಟೆಗಳು ತುಂಬಿ ಹರಿಯುತ್ತಿವೆ.

**ಶಾಸಕರಿಂದ ಸಾಂತ್ವನ:** ಅಣಬೂರು ಗೊಲ್ಲರಟ್ಟಿ ಗ್ರಾಮಕ್ಕೆ ಭೇಟಿ ನೀಡಿದ ಶಾಸಕ ಬಿ. ದೇವೇಂದ್ರಪ್ಪ ಸಿಡಿಲು ಬಡೆದು ಮೃತಪಟ್ಟ ಕುಟುಂಬದವರಿಗೆ ಸಾಂತ್ವನ ಹೇಳಿ ವೈಯಕ್ತಿಕವಾಗಿ ತಲಾ ಇಪ್ಪತ್ತೈದು ಸಾವಿರ ರೂ. ಧನ ಸಹಾಯ ಮಾಡಿದರು.

ಪ್ರಕೃತಿ ವಿಕೋಪ ಯೋಜನೆ ಅಡಿಯಲ್ಲಿ ಮೃತರ ಕುಟುಂಬಗಳಿಗೆ ತಲಾ 5 ಲಕ್ಷ ರೂ.ಗಳನ್ನು ತಕ್ಷಣವೇ ವಿತರಿಸಲು ಅಗತ್ಯ ಕ್ರಮ ಕೈಗೊಳ್ಳುವಂತೆ ಜಿಲ್ಲಾ ಉಸ್ತುವಾರಿ ಶಾಮನೂರು ಮಲ್ಲಿಕಾರ್ಜುನ್ ಅವರು ಸೂಚಿಸಿದ್ದಾರೆ ಎಂದು ಶಾಸಕ ಬಿ.ದೇವೇಂದ್ರಪ್ಪ ತಿಳಿಸಿದ್ದಾರೆ. ಈ ಸಂದರ್ಭದಲ್ಲಿ ತಹಶೀಲ್ದಾರ್ ಜಿ ಸಂತೋಷ್ ಕುಮಾರ್, ಸಿಪಿಐ ಶ್ರೀನಿವಾಸ್ ಕಂದಾಯ ಇಲಾಖೆ ಅಧಿಕಾರಿಗಳು ಇದ್ದರು.

# ಜಿ.ಟಿ ಕಟ್ಟೆ ಗೋಮಾಳ ಅತಿಕ್ರಮಣ ತೆರವು



ಮಲೇಬೆನ್ನೂರು, ಜೂ. 9 - ಮಲೇಬೆನ್ನೂರು ಹೋಬಳಿ ವ್ಯಾಪ್ತಿಯ ಜಿ ಟಿ ಕಟ್ಟೆ ಕ್ಯಾಂಪಿನ ಗೋಮಾಳದಲ್ಲಿ ಅಕ್ರಮವಾಗಿ ನಿರ್ಮಿಸಿಕೊಳ್ಳುತ್ತಿದ್ದ ಗುಡಿಸಲು ಮನೆಗಳನ್ನು, ಕಲ್ಲುಕಂಬಗಳನ್ನು ಕಂದಾಯ, ಪೊಲೀಸ್ ಇಲಾಖೆ ಅಧಿಕಾರಿಗಳು ಗುರುವಾರ ಜೆಸಿಬಿ ಮೂಲಕ ತೆರವುಗೊಳಿಸಿದ ಘಟನೆ ನಡೆದಿದೆ. 35 ನಿವೇಶನಗಳಲ್ಲಿ ಅಕ್ರಮವಾಗಿ ಕಲ್ಲುಕಂಬ ನೆಟ್ಟು, ಗುಡಿಸಲುಹಾಕಿಕೊಂಡಿದ್ದರು.

ತಹಶೀಲ್ದಾರ್ ಪೃಥ್ವಿ ಸಾನಿಕಂ, ತಾ.ಪಂ. ಕಾರ್ಯನಿರ್ವಹಣಾಧಿಕಾರಿ ಎನ್ ರವಿ. ಕಂದಾಯ ನಿರೀಕ್ಷಕ ಆನಂದ್, ಗ್ರಾಮಾಡಳಿತಾಧಿಕಾರಿ ಬೋರಯ್ಯ, ಕೊಕ್ಕನೂರು ಪಿಡಿಒ ನಾಗರಾಜ್ ಈ ವೇಳೆ ಹಾಜರಿದ್ದು ಅತಿಕ್ರಮಣ ತೆರವು ಮಾಡಿಸಿದರು.

ಗುಡಿಸಲು ನಿರ್ಮಿಸಿಕೊಂಡಿದ್ದ ಜನತೆ ತೆರವು ಮಾಡದಂತೆ ಹಾಗೂ ನಿವೇಶನ ಹಕ್ಕುಪತ್ರ ನೀಡುವಂತೆ ಅಧಿಕಾರಿಗಳಲ್ಲಿ ಮನವಿ ಮಾಡಿದರು. ಇದಕ್ಕೆ ಉಪಸ್ಥಿತ ಅಧಿಕಾರಿಗಳು ಒಪ್ಪಲಿಲ್ಲ. ಅನಧಿಕೃತ ಹಾಗೂ ಅತಿಕ್ರಮ ಪ್ರವೇಶಕ್ಕೆ ಅವಕಾಶನೀಡುವುದಿಲ್ಲ. ತೆರವು ಮಾಡುವುದಾಗಿ ಪಟ್ಟು ಹಿಡಿದರು..

ಸರ್ಕಾರದ ಭೂಮಿ ಅತಿಕ್ರಮ ಪ್ರವೇಶ ಮಾಡಿದರೆ ಕಾನೂನು ರೀತ್ಯ ಕ್ರಮಜರುಗಿಸುವ ಎಚ್ಚರಿಕೆ ನೀಡಿ, ಅಕ್ರಮವಾಗಿ ನಿರ್ಮಿಸಿಕೊಂಡಿದ್ದ, ನಿರ್ಮಾಣಹಂತದಲ್ಲಿದ್ದ, ಗುಡಿಸಲು ಮನೆಗಳನ್ನು ನೆಟ್ಟಿದ್ದ ಕಲ್ಲುಕಂಬ ತೆರವುಮಾಡಿದರು.

ಕೊನೆಗೆ ಮಾತುಕತೆ ನಡೆದು ಗ್ರಾಮ ಪಂಚಾಯತಿ ಮೂಲಕ ನಿವೇಶನ ಸಮಸ್ಯೆಶಾಶ್ವತವಾಗಿ ಪರಿಹರಿಸಲು ಒಂದು ಠರಾವು ಮಾಡಿ ಮೇಲಾಧಿಕಾರಿಗಳಿಗೆ ಕಳುಹಿಸಲು ತಾಕೀತು ಮಾಡಿದರು.

ಸಿಪಿಐ ಗೌಡಪ್ಪ ಗೌಡ ನೇತೃತ್ವದಲ್ಲಿ ಪಿಎಸ್‌ಐ ರವಿಕುಮಾರ್, ಪ್ರಭುಕೆಳಗಿನಮನೆ, ಜಿಲ್ಲಾ ಸಶಸ್ತ್ರ ಮೀಸಲು ಪಡೆ ಪೊಲೀಸರು ಭದ್ರತೆ ಒದಗಿಸಿದ್ದರು.

KA/SK/CTA-275/2021-2023. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas

# ದಾವಿವಿಯಲ್ಲಿ ವಿಶ್ವ ಪರಿಸರ ದಿನ ಆಚರಣೆ



ದಾವಣಗೆರೆ, ಜೂ.7- ದಾವಣಗೆರೆ ವಿಶ್ವವಿದ್ಯಾನಿಲಯದ ರಾಷ್ಟ್ರೀಯ ಸೇವಾ ಯೋಜನೆ ವತಿಯಿಂದ ಬುಧವಾರ ಸಸಿ ನೆಟ್ಟು ವಿಶ್ವ ಪರಿಸರ ದಿನವನ್ನು ಆಚರಿಸಲಾಯಿತು.

ವಿಶ್ವವಿದ್ಯಾನಿಲಯದ ಆವರಣದಲ್ಲಿ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಕುಲಪತಿ ಪ್ರೊ.ಬಿ.ಡಿ.ಕುಂಬಾರ ಸಸಿ ನೆಟ್ಟು, ಗಿಡಗಳಿಗೆ ನೀರುಣಿಸಿ ಪರಿಸರ ದಿನಾಚರಣೆಗೆ ಚಾಲನೆ ನೀಡಿದರು. ನಂತರ ಮಾತನಾಡಿದ ಅವರು, ಹವಾಮಾನದ ಏರುಪೇರು ಮತ್ತು ಪ್ರಕೃತಿಯ ಎಲ್ಲ ಸಮಸ್ಯೆಗಳಿಗೆ ಪರಿಸರ ನಾಶವೇ ಕಾರಣವಾಗಿದೆ. ಪರಿಸರ ರಕ್ಷಣೆ ಪ್ರತಿಯೊಬ್ಬರ ಜವಾಬ್ದಾರಿಯಾಗಿದ್ದು, ಗಿಡ ಬೆಳೆಸಿ ಮುಂದೆ ಎದುರಾಗುವ ಸಮಸ್ಯೆ ನಿವಾರಿಸಲು ಎಲ್ಲರೂ ಕೈಜೋಡಿಸಬೇಕು ಎಂದು ನುಡಿದರು.

ಗಿಡ ಮರಗಳುಳ್ಳ ಪರಿಸರ ಸುಂದರವಾಗಿರುವುದಷ್ಟೇ ಅಲ್ಲ; ಆರೋಗ್ಯಕ್ಕೂ ಉತ್ತಮವಾಗಿರುತ್ತದೆ. ಉತ್ತಮ ಆರೋಗ್ಯಕ್ಕೆ ಪರಿಸರಕ್ಕೆ ಹತ್ತಿರವಾದ ವಾತಾವರಣವನ್ನು ಸೃಷ್ಟಿಸುವುದೂ ಮುಖ್ಯ ಎಂದು ಅವರು ನುಡಿದರು.

ವಿಶ್ವವಿದ್ಯಾನಿಲಯದ ತೋಟಗಾರಿಕೆ ವಿಭಾಗವು ಸಹಭಾಗಿತ್ವ ವಹಿಸಿತ್ತು. ಈ ಸಂದರ್ಭದಲ್ಲಿ ಡೀನ್‌ರಾದ ಪ್ರೊ.ಪಿ.ಲಕ್ಷ್ಮಣ್, ಪ್ರೊ.ವೆಂಕಟರಾವ್ ಪಲಾಟಿ, ಎನ್‌ಎಸ್‌ಎಸ್ ಸಂಯೋಜನಾಧಿಕಾರಿ ಡಾ. ಅಶೋಕಕುಮಾರ್ ಪಾಳೇದ, ವಿದ್ಯಾರ್ಥಿ ಕಲ್ಯಾಣ ಘಟಕದ ನಿರ್ದೇಶಕ ಪ್ರೊ.ಯು.ಎಸ್. ಮಹಾಬಲೇಶ್ವರ, ಪ್ರಾಧ್ಯಾಪಕರಾದ ಪ್ರೊ.ಗೋವಿಂದಪ್ಪ, ಶಿವಕುಮಾರ ಕಣಸೋಗಿ, ಡಾ.ವೆಂಕಟೇಶ್, ಡಾ.ವೀರೇಶ್, ಡಾ.ಎಸ್. ಆರ್.ಸಂತೋಷಕುಮಾರ್, ತೋಟಗಾರಿಕೆ ವಿಭಾಗದ ಅಧಿಕಾರಿ ವೈ.ಎಚ್.ಕುಂದರಗಿ, ಸಂಶೋಧನಾ ವಿದ್ಯಾರ್ಥಿಗಳು ಭಾಗವಹಿಸಿದ್ದರು.

# ಬಸವನಾಳದಲ್ಲಿ ಸಂಗೀತ ಕಾರ್ಯಕ್ರಮ



ದಾವಣಗೆರೆ, ಜೂ.9- ಶ್ರೀ ರೇಣುಕಾ ಬ್ರಾಸ್ ಬ್ಯಾಂಡ್ ಆರ್ಕೆಸ್ಟ್ರಾ ಹಾಗೂ ಜಾನಪದ ಸಂಗೀತ ಸಾಂಸ್ಕೃತಿಕ ಕಲಾ ಸಂಸ್ಥೆ, ಎಸ್. ಸಿರಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರ ಸಹಕಾರದೊಂದಿಗೆ ಬಸವನಾಳ ಗೊಲ್ಲರಹಟ್ಟಿ ಗ್ರಾಮದಲ್ಲಿ ಸಂಗೀತ ಕಾರ್ಯಕ್ರಮ ಏರ್ಪಡಿಸಲಾಗಿತ್ತು.

ಕಾರ್ಯಕ್ರಮದಲ್ಲಿ ಮಾಯಕೊಂಡ ವಿಧಾನಸಭಾ ಕ್ಷೇತ್ರದ ಶಾಸಕ ಕೆ.ಎಸ್. ಬಸವಂತಪ್ಪ ಮಾತನಾಡಿ, ಕ್ಷೇತ್ರದಲ್ಲಿ ರಾಜ್ಯ ಮಟ್ಟದ ಸಂಗೀತ ಕಾರ್ಯಕ್ರಮಗಳು ನಡೆಯಬೇಕು. ನನ್ನ ಕ್ಷೇತ್ರದಲ್ಲಿ ಬರುವಂತಹ ಉತ್ತಮವಾದ ಕಲಾವಿದರನ್ನು ಗುರುತಿಸಿ ಪ್ರೋತ್ಸಾಹ ನೀಡಿ, ಎಲ್ಲಾ ಕಲಾವಿದರಿಗೆ ಅನುಕೂಲ ಮಾಡಿಕೊಡುವುದಾಗಿ ಭರವಸೆ ನೀಡಿದರು.

ಕಲಾವಿದ ಎಂ. ಶಿವರಾಜ್ ಅವರು ಸ್ಯಾಕ್ಸೋಫೋನ್ ಮೂಲಕ ಸಂಗೀತ ವನ್ನು ನುಡಿಸಿದರು. ಅವರ ಸಾಥಿಯಾಗಿ ಎಚ್.ಇಂಚರ, ದರ್ಶನ್, ಚಂದ್ರು, ಕಿರಣ್ ಕುಮಾರ್, ಉಮೇಶ್ ನಾಯಕ್ ಕಾರ್ಯಕ್ರಮದಲ್ಲಿ ಮೆರಗು ತಂದರು.

ಕಾರ್ಯಕ್ರಮದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ರವಿಚಂದ್ರ, ಹಿರಿಯ ಕಲಾವಿದ ಮರುಳಸಿದ್ದಪ್ಪ, ಚಲವಾದಿ ಸಂಸ್ಥೆಯ ಅಧ್ಯಕ್ಷ ಎಂ. ಹಾಲೇಶ್, ಕಲಾವಿದ ಗ್ರಾ.ಪಂ. ಸದಸ್ಯ ಎಚ್. ಸೋಮಶೇಖರಪ್ಪ, ನಂದನಾಯಕ್ ಚಿನ್ನಸಮುದ್ರ, ಉಮೇಶ್ ನಾಯಕ್ ಮತ್ತಿತರರು ಉಪಸ್ಥಿತರಿದ್ದರು.

# ದಾಸೋಹ ಭಾವನೆಯಿಂದ ಸೇವೆ ಮಾಡೋಣ

## ದಾವಣಗೆರೆ ವಿದ್ಯಾನಗರ ಲಯನ್ಸ್ ಕ್ಲಬ್ ನೂತನ ಅಧ್ಯಕ್ಷ ಲಯನ್. ಸಿ.ಹೆಚ್.ದೇವರಾಜ್



ದಾವಣಗೆರೆ, ಜೂ.9- ಯಾವುದೇ ಅಹಂ ಇಲ್ಲದೇ ದಾಸೋಹ ಭಾವನೆಯಿಂದ ಸೇವಾ ಚಟುವಟಿಕೆಗಳನ್ನು ಕೈಗೊಂಡಾಗ ಮಾತ್ರ ಅದು ಸಾರ್ಥಕ್ಯವಾಗುತ್ತದೆ ಎಂದು ದಾವಣಗೆರೆ ವಿದ್ಯಾನಗರ ಲಯನ್ಸ್ ಕ್ಲಬ್ ನೂತನ ಅಧ್ಯಕ್ಷ ಸಿ.ಹೆಚ್.ದೇವರಾಜ್ ಹೇಳಿದರು.

ವಿದ್ಯಾನಗರ ಲಯನ್ಸ್ ಕ್ಲಬ್‌ನಲ್ಲಿ ಇಂದು ಹಮ್ಮಿಕೊಳ್ಳಲಾಗಿದ್ದ ಕಾರ್ಯಕ್ರಮದಲ್ಲಿ 2023-24 ನೇ ಸಾಲಿಗೆ ನೂತನ ಅಧ್ಯಕ್ಷರಾಗಿ ಪದಗ್ರಹಣಗೊಂಡು ಅವರು ಮಾತನಾಡಿದರು.

ಕೊಟ್ಟೆವು ಎಂಬ ಭಾವ ದಾನ ಮಾಡಿದವರಲ್ಲಿರಬಾರದು. ತಗೆದುಕೊಂಡೆವಲ್ಲ ಎನ್ನುವ ದೈನೇಸಿ ಭಾವನೆ ದಾನ ತೆಗೆದುಕೊಂಡವರಲ್ಲಿರಬಾರದು. ಹೀಗಾದಾಗ ಮಾತ್ರ ದಾನ ಧರ್ಮಕ್ಕೆ ಅರ್ಥ ಬರುತ್ತದೆ ಎಂದು ಅವರು ಹೇಳಿದರು.

ಪ್ರಪಂಚದಲ್ಲಿ ಸುಮಾರು 48 ಸಾವಿರ ಹಾಗೂ ದೇಶದಲ್ಲಿ ಸುಮಾರು 6500 ಲಯನ್ಸ್ ಶಾಖೆಗಳಿವೆ. ಇಂತಹ ಶಾಖೆಗಳಲ್ಲಿ ವಿದ್ಯಾನಗರ ಲಯನ್ಸ್ ಕ್ಲಬ್ ಕೂಡಾ ಒಂದಾಗಿದೆ. ಇಂತಹ ಪ್ರತಿಷ್ಠಿತ ಕ್ಲಬ್ಬಿನ ಅಧ್ಯಕ್ಷನನ್ನಾಗಿ ನನ್ನನ್ನು ಅವಿರೋಧವಾಗಿ ಆಯ್ಕೆ ಮಾಡಿ ಸೇವೆ ಮಾಡಲು ಅವಕಾಶ ಮಾಡಿಕೊಟ್ಟ ಕ್ಲಬ್ಬಿನ ಎಲ್ಲಾ ಸದಸ್ಯರಿಗೆ ಅವರು ಕೃತಜ್ಞತೆ ಸಲ್ಲಿಸಿದರು.

ಏನೂ ಇಲ್ಲದಿದ್ದರೂ ಯಾವ ರೀತಿ ಸೇವಾ ಕಾರ್ಯಗಳನ್ನು ಮಾಡಬಹುದು ಎಂಬುದಕ್ಕೆ ಬಿಜಾಪುರದ ಜ್ಞಾನಯೋಗಿ ಸಿದ್ದೇಶ್ವರ ಸ್ವಾಮೀಜಿಗಳು ಹಾಗೂ ಎಲ್ಲವೂ ಇದ್ದಾಗ್ಯೂ ಕೂಡ ಯಾವ ರೀತಿ ಅನ್ಯರಿಗೆ ಗೊತ್ತಾಗದ ರೀತಿ ದಾನ, ಧರ್ಮಗಳನ್ನು ಕೈಗೊಂಡ ದಿ.ಪುನೀತ್ ರಾಜಕುಮಾರ್ ತೋರಿಸಿಕೊಟ್ಟಿದ್ದಾರೆ. ಇವರನ್ನು ಆದರ್ಶವಾಗಿಟ್ಟುಕೊಂಡು ಮುಂಬರುವ ವರ್ಷಗಳಲ್ಲಿ ನಮ್ಮ ಕ್ಲಬ್ಬಿನ ವತಿಯಿಂದ ಸೇವಾ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗುವುದು ಎಂದು ತಿಳಿಸಿದರು.

ನೂತನ ತಂಡವನ್ನು ಪ್ರತಿಷ್ಠಾಪಿಸಿ ಮಾತನಾಡಿದ ಜಿಲ್ಲಾ ಗೌರ್ನರ್ ಡಾ.ಎಂ. ಕೆ.ಭಟ್ ಮಾತನಾಡಿ, ಲಯನ್ಸ್ ಕ್ಲಬ್ ಇತರೆ ಕ್ಲಬ್‌ಗಳಂತೆ ಮನೋರಂಜನಾ ತಾಣಗಳಲ್ಲ. ಇದು ಸೇವಾ ಮಾಧ್ಯಮ ಇರುವವರ ಮತ್ತು ಇಲ್ಲದವರ ನಡುವೆ ಸಂಪರ್ಕ ಸೇತುವೆಯಾಗಿ ಲಯನ್ಸ್ ಕ್ಲಬ್‌ಗಳು ಕೆಲಸ ಮಾಡಲಿವೆ ಎಂದರು.

ಇದೇ ಸಂದರ್ಭದಲ್ಲಿ ನೂತನ ಅಧ್ಯಕ್ಷ ದೇವರಾಜ್ ಅವರು ಎರಡು ಹೊಲಿಗೆ ಯಂತ್ರಗಳನ್ನು ಶ್ರೀಮತಿ ಶಶಿಕಲಾ ಹಾಲೇಶ್ ಹಾಗೂ ಶ್ರೀಮತಿ ಆಶಾ ಮುರುಗೇಶ್ ಅವರುಗಳಿಗೆ ಕೊಡುಗೆಯಾಗಿ ನೀಡಿದರು. ಕುಡಿಯುವ ನೀರಿನ ಯಂತ್ರ, ಶಾಲಾ ಮಕ್ಕಳಿಗೆ ಪುಸ್ತಕ, ಬೆಡ್‌ಶೀಟ್‌ಗಳನ್ನು ಇತರೆ ಸದಸ್ಯರು ಕೊಡುಗೆಯಾಗಿ ನೀಡಿದರು.

ಬಿ.ದಿಳ್ಳೆಪ್ಪ, ಹೆಚ್.ಎನ್. ಶಿವಕುಮಾರ್, ಎ.ಆರ್.ಉಜ್ಜಿನೆಪ್ಪ, ಡಾ.ಶಿವಲಿಂಗಪ್ಪ, ಓಂಕಾರಪ್ಪ, ಓ.ಜಿ.ರುದ್ರಗೌಡ್ರು, ಬಸವರಾಜಪ್ಪ, ಎಲ್.ಎಸ್.ಪ್ರಭುದೇವ್ ಉಪಸ್ಥಿತರಿದ್ದರು. ಆಸರೆ ಕ್ಲಬ್ ಅಧ್ಯಕ್ಷ ಮೌನೇಶ್ ನಿರೂಪಿಸಿದರು. ಸುಲೋಚನವಮ್ಮ ಧ್ವಜ ವಂದನೆ ನೆರವೇರಿಸಿದರು.

## ನಗರದಲ್ಲಿ ಇಂದು ಸಂಗೀತ ಸಂಭ್ರಮ

ಅಕ್ಕಮಹಾದೇವಿ ಮಹಿಳಾ ಸಾಂಸ್ಕೃತಿಕ ಕಲಾ ಸಂಘ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ ವಿಚಾರ ಗೋಷ್ಠಿ ಮತ್ತು ಸಂಗೀತ ಸಂಭ್ರಮ ಉದ್ಘಾಟನಾ ಸಮಾರಂಭವನ್ನು ಇಂದು ಮಧ್ಯಾಹ್ನ 3.30 ಕ್ಕೆ ಗಡಿಯಾರ ಕಂಬದ ಹತ್ತಿರವಿರುವ ಜಿಲ್ಲಾ ಕಾರಾಗೃಹದಲ್ಲಿ ಹಮ್ಮಿಕೊಳ್ಳಲಾಗಿದೆ.

ಶ್ರೀ ಡಾ. ಕೇದಾರಲಿಂಗ ಶಿವಶಾಂತ ವೀರ ಶಿವಾಚಾರ್ಯ ಸ್ವಾಮೀಜಿ (ಚನ್ನಗಿರಿ) ಸಾನ್ನಿಧ್ಯ ವಹಿಸುವರು. ಗಣ್ಯರಿಂದ ಕಾರ್ಯಕ್ರಮ ಉದ್ಘಾಟನೆಗೊಳ್ಳಲಿದೆ. ಶ್ರೀಮತಿ ಎಲ್. ಭಾಗೀರಥಿ ಅಧ್ಯಕ್ಷತೆ ವಹಿಸುವರು. ಗೋಷ್ಠಿಯ ಚಿಂತಕರಾಗಿ ಬಸವರಾಜ ಐರಣಿ ಆಗಮಿಸಿ 'ಬದುಕಿನ ಭವ್ಯತೆಗೆ ಕಲೆಗಳು ಜೀವನಾಡಿ' ವಿಷಯ ಕುರಿತು ಮಾತನಾಡುವರು.

ಮುಖ್ಯ ಅತಿಥಿಗಳಾಗಿ ಅಶೋಕ ಛಲವಾದಿ, ರವಿಚಂದ್ರ, ಶ್ರೀಮತಿ ಪಂಕಜ ದಯಾನಂದ, ಬಿ.ಇ. ತಿಪ್ಪೇಸ್ವಾಮಿ, ಶ್ರೀಮತಿ ಎಸ್.ಜಿ. ಶಾಂತ, ಎನ್.ಎಸ್. ರಾಜು ಆಗಮಿಸುವರು.

ಸಂಗೀತ ಸುಧೆ ಉಣಬಡಿಸುವ ತಂಡಗಳು : ಕೆ.ಎನ್. ಗದ್ದಿಗೇಶ್ ಮತ್ತು ಸಂಗಡಿಗರು (ಉಕ್ಕಡಗಾತ್ರಿ), ಹಾದಿಮನೆ ನಾಗರಾಜ್ ಮತ್ತು ಸಂಗಡಿಗರು (ಅರಸೀಕೆರೆ), ಬಿ. ಲಕ್ಷ್ಮಣಚಾರಿ ಮತ್ತು ಸಂಗಡಿಗರು (ದಾವಣಗೆರೆ).

# ಶಿಕ್ಷಕರನ್ನು ಗೌರವಿಸಿ, ಪೋಷಕರನ್ನು ಪ್ರೀತಿಸಬೇಕು



## ವಿದ್ಯಾರ್ಥಿಗಳಿಗೆ ಡಾ. ಪ್ರಭಾ ಮಲ್ಲಿಕಾರ್ಜುನ್ ಸಲಹೆ

ದಾವಣಗೆರೆ, ಜೂ.9- ಎಆರ್‌ಜಿ ಕಲಾ ಮತ್ತು ವಾಣಿಜ್ಯ ಕಾಲೇಜಿನಲ್ಲಿ ಹಮ್ಮಿಕೊಳ್ಳಲಾಗಿದ್ದ ಎಆರ್‌ಜಿ - ವೈಭವ 2023 ರ ಎರಡನೇ ದಿನದ ಆರೋಗ್ಯ ಪರಂಪರೆಯ ಆಹಾರ ಮೇಳ ಕಾರ್ಯಕ್ರಮವನ್ನು ಉದ್ಘಾಟಿಸಿ, ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದ ಎಸ್.ಎಸ್. ಕೇರ್ ಟ್ರಸ್ಟ್ ಅಧ್ಯಕ್ಷರಾದ ಡಾ. ಪ್ರಭಾ ಮಲ್ಲಿಕಾರ್ಜುನ್, ಇತ್ತೀಚಿನ ಒತ್ತಡದ ಜೀವನ ಮತ್ತು ಆರೋಗ್ಯ ವ್ಯವಸ್ಥೆಯ ಬಗ್ಗೆ ಕಳವಳ ವ್ಯಕ್ತಪಡಿಸಿದರು.

ಯೋಗ, ಪ್ರಾಣಾಯಾಮ, ಧ್ಯಾನ ಮಾಡುವುದರಿಂದ ಮಾನಸಿಕ ಒತ್ತಡ ಕಡಿಮೆ ಮಾಡಿಕೊಳ್ಳಬಹುದು ಎಂದು ತಿಳಿಸಿದ ಅವರು ಆಂತರಿಕ, ಕುಟುಂಬ ಹಾಗೂ ಸಾಮಾಜಿಕ ಜವಾಬ್ದಾರಿಗಳ ಕಡೆ ಹೆಚ್ಚು ಗಮನಹರಿಸಲು ತಿಳಿಸಿ, ಕುಟುಂಬ ಮತ್ತು ಪ್ರಕೃತಿಯ ಜೊತೆ ಹೆಚ್ಚು ಸಮಯವನ್ನು ಕಳೆಯುವ ಅಭ್ಯಾಸ ಬೆಳೆಸಿಕೊಳ್ಳಲು ತಿಳಿಸಿದ ಅವರು ಶಿಕ್ಷಕರಿಗೆ ಗೌರವಿಸಬೇಕು ಹಾಗೂ ಪೋಷಕರನ್ನು ಪ್ರೀತಿಸಬೇಕು ಎಂದು ಸಲಹೆ ನೀಡಿದರು.

ಅತಿಥಿಗಳಾಗಿ ಭಾಗವಹಿಸಿದ್ದ ಬಾಪೂಜಿ ಸಂಸ್ಥೆಯ ಶೈಕ್ಷಣಿಕ ನಿರ್ದೇಶಕ ಎಂ.ಜಿ ಈಶ್ವರಪ್ಪ ಮಾತನಾಡಿ, ವಿದ್ಯಾರ್ಥಿಗಳಿಗೆ ಆರೋಗ್ಯ ಪದ್ಧತಿ ಹಾಗೂ ಜೀವನ ಪದ್ಧತಿಯ ಬಗ್ಗೆ ಸವಿಸ್ತಾರವಾಗಿ ಮಾಹಿತಿ ನೀಡಿದರು.

ಸಭೆಯ ಅಧ್ಯಕ್ಷತೆಯನ್ನು ಪ್ರಾಂಶುಪಾಲ ಜಿ.ಬಿ. ಬೋರಯ್ಯ ವಹಿಸಿದ್ದರು. ಸಭೆಯಲ್ಲಿ ಪದವಿ ಪೂರ್ವ ಪ್ರಾಂಶುಪಾಲ ಬೊಮ್ಮಣ್ಣ ಸೇರಿದಂತೆ ಇತರರು ಉಪಸ್ಥಿತರಿದ್ದರು.

# ದೇವಾಂಗ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ, ವಧು-ವರರ ಸಮಾವೇಶ

ದಾವಣಗೆರೆ, ಜೂ.9- ಎಸ್ಸೆಸ್ಸೆಲ್ಸಿಯಲ್ಲಿ ಶೇ. 85 ಮತ್ತು ಪಿಯುಸಿಯಲ್ಲಿ ಶೇ. 80 ಕ್ಕಿಂತ ಹೆಚ್ಚು ಅಂಕ ಪಡೆದಿರುವ ದಾವಣಗೆರೆ ಜಿಲ್ಲೆಯಲ್ಲಿ ವ್ಯಾಸಂಗ ಮಾಡಿರುವ ದೇವಾಂಗ ಸಮಾಜದ ವಿದ್ಯಾರ್ಥಿಗಳು ಪ್ರತಿಭಾ ಪುರಸ್ಕಾರಕ್ಕೆ ಇದೇ 30ರೊಳಗೆ ಅರ್ಜಿ ಸಲ್ಲಿಸಬಹುದಾಗಿದೆ.

ನಗರದ ದೇವಾಂಗ ಸಂಘದ ವತಿಯಿಂದ 5ನೇ ವರ್ಷದ ದೇವಾಂಗ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಸಮಾರಂಭವು ಬರುವ ಜುಲೈ 16ರ ಬೆಳಿಗ್ಗೆ 9.30ಕ್ಕೆ ಕೊಂಡಜ್ಜಿ ರಸ್ತೆಯಲ್ಲಿರುವ ಶ್ರೀ ಲಕ್ಷ್ಮಿ ವೆಂಕಟೇಶ್ವರ ಸಮುದಾಯ ಭವನದಲ್ಲಿ ಹಮ್ಮಿಕೊಳ್ಳಲಾಗಿದೆ.

ಮಾಹಿತಿಗೆ ಶ್ರೀ ದೇವಾಂಗ ವಿದ್ಯಾರ್ಥಿ ನಿಲಯ, ಡಾ॥ ಪುರಂತರ ಆಸ್ಪತ್ರೆ, ಎಂ.ಸಿ.ಸಿ. 'ಎ' ಬ್ಲಾಕ್, ದಾವಣಗೆರೆ (98806 62036, 99868 59030, 91648 29666, 94488 73489) ಇಲ್ಲಿಗೆ ಸಂಪರ್ಕಿಸಬಹುದು.

## ರೈಲ್ವೆ ಸುರಕ್ಷತಾ ಅನುದಾನ ದುರ್ಬಳಕೆಯ ಆರೋಪ

ನವದೆಹಲಿ, ಜೂ. 9 – ರೈಲ್ವೆ ಸುರಕ್ಷತೆಗಾಗಿ ಬಳಸಬೇಕಿದ್ದ ಅನುದಾನವನ್ನು ಕೇಂದ್ರ ಸರ್ಕಾರ ಕಾರಿನ ಬಾಡಿಗೆ, ಪೀಠೋಪಕರಣ, ಲ್ಯಾಪ್‌ಟಾಪ್ ಹಾಗೂ ಮಸಾಜ್ ಯಂತ್ರಗಳಿಗೆ 'ದುರ್ಬಳಕೆ' ಮಾಡಿಕೊಂಡಿದೆ ಎಂದು ಕಾಂಗ್ರೆಸ್ ಆರೋಪಿಸಿದೆ. ಈ ಬಗ್ಗೆ ಹೇಳಿಕೆ ನೀಡಿರುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್, ರೈಲ್ವೆ ಸುರಕ್ಷತೆಗೆ ನಿರ್ದಿಷ್ಟವಾಗಿ ಬಳಸಬೇಕಿದ್ದ ಹಣವನ್ನು ಬೇರೆ ಉದ್ದೇಶಗಳಿಗೆ ಬಳಸಲಾಗಿದೆ ಎಂದು ಸಿ.ಎ.ಜಿ. ವರದಿಯಲ್ಲಿ ತಿಳಿಸಲಾಗಿದೆ ಎಂದಿದ್ದಾರೆ. ಮಾರ್ಚ್ 2021ರಲ್ಲಿ ಸಿ.ಎ.ಜಿ. ನೀಡಿರುವ ವರದಿಯಲ್ಲಿರುವ ಅಂಶಗಳನ್ನು ಪ್ರಸ್ತಾಪಿಸಿರುವ ಅವರು, ಮೋದಿ ಸರ್ಕಾರ ರೈಲ್ವೆ ಸುರಕ್ಷಾ ನಿಧಿಯ ದುರ್ಬಳಕೆ ಮಾಡಿಕೊಂಡಿದೆ ಎಂದಿದ್ದಾರೆ.

## ಟರ್ಕಿ : ಅಪಮೌಲ್ಯ, ಹಣದುಬ್ಬರ ಉಲ್ಬಣ

ಅಂಕಾರ, ಜೂ. 9 - ಟರ್ಕಿ ಅಧ್ಯಕ್ಷ ರೆಸೆಪ್ ಟಯಿಪ್ ಎರ್ಡಗನ್ ಕಳೆದ ತಿಂಗಳು ನಡೆದ ಚುನಾವಣೆಯಲ್ಲಿ ಗೆಲುವು ಸಾಧಿಸಿದ ಬೆನ್ನಲ್ಲೇ, ಟರ್ಕಿ ಹಣದ ಅಪಮೌಲ್ಯವಾಗಿದೆ.

ಎರ್ಡಗನ್ ಆರ್ಥಿಕ ನೀತಿಗಳ ಕುರಿತ ಅನಿಶ್ಚಿತತೆ ಹಾಗೂ ವಿದೇಶಿ ಹಣ ವಿನಿಮಯದ ಮೇಲೆ ನಿರ್ಬಂಧ ಸಡಿಲಿಸಿರುವ ಕಾರಣದಿಂದ ಟರ್ಕಿ ಹಣ ಡಾಲರ್ ಎದುರು ದಾಖಲೆ ಹಂತಕ್ಕೆ ಕುಸಿದಿದೆ.

ಈ ವರ್ಷದ ಆರಂಭಕ್ಕೆ ಹೋಲಿಸಿದರೆ ಟರ್ಕಿ ಹಣ ಲಿರಾದ ಮೌಲ್ಯ ಶೇ.20ರಷ್ಟು ಕುಸಿದಿದೆ. ಇದರಿಂದಾಗಿ ಅಗತ್ಯ ವಸ್ತುಗಳ ಬೆಲೆ ಏರಿಕೆಯಾಗುತ್ತಿದೆ.

ಎರ್ಡಗನ್ ಅವರ ಅಸಾಂಪ್ರದಾಯಿಕ ಆರ್ಥಿಕ ನೀತಿಗಳಿಂದ 2021ರಲ್ಲೇ ಟರ್ಕಿಯಲ್ಲಿ ತೀವ್ರ ಹಣದುಬ್ಬರ ಉಂಟಾಗಿತ್ತು.

ಹಣದುಬ್ಬರ ಹೆಚ್ಚಾದಾಗ ಬ್ಯಾಂಕುಗಳು ಬಡ್ಡಿ ದರ ಹೆಚ್ಚಿಸುವುದು ಸಾಂಪ್ರದಾಯಿಕ ಆರ್ಥಿಕ ನೀತಿಯಾಗಿದೆ. ಆದರೆ, ಎರ್ಡಗನ್ ಅವರು ಬಡ್ಡಿ ದರ ಹೆಚ್ಚಳದಿಂದ ಹಣದುಬ್ಬರ ಹೆಚ್ಚಾಗುತ್ತದೆ ಎಂಬ ನಿಲುವು ತಳೆದಿದ್ದರು. ಹೀಗಾಗಿ ಹಣದುಬ್ಬರ ಹೆಚ್ಚಾದರೂ ಸಹ, ಅವರು ಬಡ್ಡಿ ದರ ಹೆಚ್ಚಿಸಲು ಅವಕಾಶ ನೀಡಿರಲಿಲ್ಲ.

ಕಳೆದ ವರ್ಷ ಹಣದುಬ್ಬರ ಶೇ.85ರ ಹಂತಕ್ಕೆ ತಲುಪಿತ್ತು. ಆದರೂ, ಪ್ರಮುಖ ಬಡ್ಡಿ ದರಗಳನ್ನು ಶೇ.19ರಿಂದ ಶೇ.8.5ಕ್ಕೆ ಇಳಿಸಲಾಗಿತ್ತು.

ಕಳೆದ ತಿಂಗಳು ಹಣದುಬ್ಬರ ಶೇ.39.5ಕ್ಕೆ ಇಳಿಕೆಯಾಗಿದೆ ಎಂದು ಅಧಿಕೃತ ಅಂಕಿ-ಅಂಶಗಳು ತಿಳಿಸಿವೆ. ಆದರೆ, ಹಣದುಬ್ಬರ ಇದಕ್ಕೂ ಹೆಚ್ಚಾಗಿದೆ ಎಂದು ಸ್ವತಂತ್ರ ಸಂಸ್ಥೆಗಳು ಹೇಳಿವೆ.

ಅಲ್ಲದೇ, ಚುನಾವಣೆಗೆ ಮುಂಚೆ ಸರ್ಕಾರ ಮಾರುಕಟ್ಟೆಯಲ್ಲಿ ಮಧ್ಯ ಪ್ರವೇಶ ಮಾಡಿ ಟರ್ಕಿ ಹಣದ ಮೌಲ್ಯ ಹೆಚ್ಚಾಗುವಂತೆ ಮಾಡಿತ್ತು. ಇದರಿಂದಾಗಿ ಟರ್ಕಿಯ ವಿದೇಶಿ ವಿನಿಮಯ ಕುಸಿದಿತ್ತು.

ಎರ್ಡಗನ್ ಅವರು ಮೆರಿಲ್ ಲಿಂಚ್‌ನ ಮಾಜಿ ಬ್ಯಾಂಕರ್ ಮೆಹ್ಮೆದ್ ಸಿಮ್ಸೆಕ್ ಅವರನ್ನು ಸಂಪುಟಕ್ಕೆ ಸೇರ್ಪಡೆ ಮಾಡಿಕೊಂಡಿದ್ದಾರೆ. ಸಿಮ್ಸೆಕ್ ಅವರು ಸಾಂಪ್ರದಾಯಿಕ ಆರ್ಥಿಕ ನೀತಿಯ ಕಡೆ ಒಲವು ತೋರಿದ್ದಾರೆ. ಆದರೆ, ಎರ್ಡಗನ್ ಅವರು ಎಷ್ಟರ ಮಟ್ಟಿಗೆ ಆರ್ಥಿಕತೆಯ ಮೇಲಿನ ಹಿಡಿತ ಬಿಟ್ಟುಕೊಡಲಿದ್ದಾರೆ ಎಂಬುದು ಇನ್ನೂ ಸ್ಪಷ್ಟವಾಗಿಲ್ಲ.

ಹಣದುಬ್ಬರದ ಕಾರಣದಿಂದ ದಿನಬಳಕೆ ವಸ್ತುಗಳ ಬೆಲೆ ಏರುತ್ತಿದೆ. ಟರ್ಕಿ ಹಣದ ಮೌಲ್ಯ ಕುಸಿತದಿಂದ ಆಮದು ದುಬಾರಿಯಾಗುತ್ತಿದೆ. ಇಂಧನದಿಂದ ಹಿಡಿದು ಎಲ್ಲದಕ್ಕೂ ಹೆಚ್ಚು ಬೆಲೆ ತೆರಬೇಕಿದೆ.

# ದಲಿತರಲ್ಲಿ ಜಾಗೃತಿ ದೀಪ ಹಚ್ಚಿದ್ದು ಪ್ರೊ.ಕೃಷ್ಣಪ್ಪ



## ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕ ನಾಗರಾಜ್

ಹರಿಹರ, ಜೂ. 9 - ರಾಜ್ಯದ ದಲಿತ ಸಮುದಾಯಗಳಲ್ಲಿ ಜಾಗೃತಿಯ ದೀಪ ಹಚ್ಚಿದ ಕೀರ್ತಿ ಪ್ರೊ. ಬಿ.ಕೃಷ್ಣಪ್ಪನವರಿಗೆ ಸಲ್ಲುತ್ತದೆ ಎಂದು ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕ ಕೆ. ನಾಗರಾಜ್ ಹೇಳಿದರು.

ಇಲ್ಲಿನ ಬೈಪಾಸ್ ಬಳಿಯ ಮೈತ್ರಿ ವನದಲ್ಲಿರುವ ದಲಿತ ಸಂಘರ್ಷ ಸಮಿತಿ ಸ್ಥಾಪಕ ಪ್ರೊ.ಬಿ.ಕೃಷ್ಣಪ್ಪನವರ ಸಮಾಧಿ ಸ್ಥಳದಲ್ಲಿ ದಸಂಸ ತಾಲ್ಲೂಕು ಘಟಕದಿಂದ ಆಯೋಜಿಸಿದ್ದ ಪ್ರೊ. ಬಿ.ಕೃಷ್ಣಪ್ಪನವರ 85ನೇ ಜಯಂತಿಗೆ ಚಾಲನೆ ನೀಡಿ ಅವರು ಮಾತನಾಡಿದರು.

ಡಾ. ಬಿ.ಆರ್.ಅಂಬೇಡ್ಕರ್‌ರವರು ಸಂವಿಧಾನ ರಚಿಸಿ ದೇಶದಲ್ಲಿ ಸಾಮಾಜಿಕ ಸಮಾನತೆಗೆ ದಾರಿ ಮಾಡಿಕೊಟ್ಟರು. ಆ ಸಂವಿಧಾನದಿಂದ ಪ್ರೇರಣೆಗೊಂಡ ಕೃಷ್ಣಪ್ಪನವರು ಕಾಲೇಜಿನಲ್ಲಿ ಅಧ್ಯಾಪಕ ವೃತ್ತಿಯನ್ನು ನಿರ್ವಹಿಸುತ್ತಲೇ, ರಾಜ್ಯಾದ್ಯಂತ ಸಂಚರಿಸಿ, ದಲಿತ ಸಮುದಾಯಗಳಲ್ಲಿ ಜಾಗೃತಿಯ ದೀಪ ಹಚ್ಚಿದರು ಎಂದರು.

ಸಹ ಉದ್ಘಾಟಕರಾಗಿ ಆಗಮಿಸಿದ್ದ ತಹಶೀಲ್ದಾರ್ ಪೃಥ್ವಿ ಸಾನಿಕಂ ಮಾತನಾಡಿ, ಶಿಕ್ಷಣವೇ ಎಲ್ಲಾ ಸಮುದಾಯಗಳ ಅಭಿವೃದ್ಧಿಗೆ ಆಧಾರವಾಗಿದೆ. ತಳ ಸಮುದಾಯದ ಜನರು ಸಂಕಷ್ಟಗಳಿಗೆ ಎದೆ ಗುಂದದೆ ಶಿಕ್ಷಣವಂತರಾಗಬೇಕು ಎಂದರು.

ದಸಂಸ (ಪ್ರೊ.ಬಿ.ಕೃಷ್ಣಪ್ಪ ಸ್ಥಾಪಿತ) ತಾಲ್ಲೂಕು ಸಂಚಾಲಕ ಪಿ.ಜೆ.ಮಹಾಂತೇಶ್ ಮಾತನಾಡಿ, ಕನ್ನಡ ನಾಡಿನ ಮೂಲೆ, ಮೂಲೆಗೆ ಸಂಚರಿಸಿ ದಲಿತರಲ್ಲಿ ಜಾಗೃತಿ ಮೂಡಿಸಿದ ಪ್ರೊ.ಬಿ. ಕೃಷ್ಣಪ್ಪನವರು ಹರಿಹರದವರೆಂಬುದೇ ಹೆಮ್ಮೆಯ ವಿಷಯ ಎಂದರು.

ಕೃಷ್ಣಪ್ಪನವರ ಹೋರಾಟದ ಮಜಲುಗಳ ಅಧ್ಯಯನ ನಡೆಯಬೇಕೆಂಬ ಹಿನ್ನೆಲೆಯಲ್ಲಿ, ದಾವಣಗೆರೆ ವಿಶ್ವವಿದ್ಯಾನಿಲಯದಲ್ಲಿ ಅವರ ಹೆಸರಲ್ಲಿ ಒಂದು ಅಧ್ಯಯನ ಪೀಠ ಆರಂಭಿಸಬೇಕೆಂಬ ಕೂಗಿಗೆ ವಿ.ವಿ. ಅಥವಾ ಸರ್ಕಾರ ಈವರೆಗೆ ಸ್ಪಂದಿಸದಿರುವುದು ಬೇಸರ ಮೂಡಿಸಿದೆ ಎಂದರು.

ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ನಾಸಿರುದ್ದೀನ್, ಗ್ರಾಮ ಲೆಕ್ಕಾಧಿಕಾರಿ ಎಚ್.ಜಿ.ಹೇಮಂತ್ ಕುಮಾರ್, ಹೊಸಪಾಳ್ಯ ಗ್ರಾ.ಪಂ. ಸದಸ್ಯ ಪರಶುರಾಮ, ದಸಂಸ ಪದಾಧಿಕಾರಿಗಳಾದ ಚೌಡಪ್ಪ ಭಾನುವಳ್ಳಿ, ಲಕ್ಷ್ಮಪ್ಪ ವಿ.ಎನ್., ಹನುಮಂತಪ್ಪ ಮುಂಡಗೋಡು, ಲಕ್ಷ್ಮಪ್ಪ, ರಾಜಪ್ಪ, ಕುಮಾರ್, ಕರಿಯ, ದುರ್ಗಮ್ಮ, ಹಳದಮ್ಮ, ಮೈಲಮ್ಮ, ಭಾಗ್ಯಮ್ಮ, ಮಲ್ಲಮ್ಮ, ನೀಲಮ್ಮ ಮತ್ತಿತರರು ಉಪಸ್ಥಿತರಿದ್ದರು.


## ಬಾಪೂಜಿ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್, ದಾವಣಗೆರೆ

ಆಡಳಿತ ಕಚೇರಿ, ಹರ್ಡೇಕರ್ ಮಂಜಪ್ಪ ರಸ್ತೆ, ದಾವಣಗೆರೆ

### ಸ್ಥಿರ ಸೊತ್ತಿನ ಬಹಿರಂಗ ಹರಾಜು ಪ್ರಕಟಣೆ

ಈ ಕೆಳಕಂಡ ಸುಸ್ತಿದಾರರ ಮೇಲೆ ಬ್ಯಾಂಕ್ ದಾವಾ ಕ್ರಮ ಜರುಗಿಸಿ ಡಿಕ್ರಿ ಹುಕುಂ ಪಡೆದು, ಸದರಿ ಸಾಲದ ವಸೂಲಾತಿಗಾಗಿ ಸ್ಥಿರಾಸ್ತಿ ಸೊತ್ತುಗಳನ್ನು ಈ ಕೆಳಗೆ ನಮೂದಿಸಿರುವ ಸ್ಥಳ ಮತ್ತು ವೇಳೆಯಲ್ಲಿ ಬಹಿರಂಗ ಹರಾಜು ಮಾಡಲಾಗುತ್ತೆ. ಹರಾಜಿನಲ್ಲಿ ಸ್ಥಿರ ಸೊತ್ತನ್ನು ಕೊಳ್ಳಲು ಇಚ್ಛೆವುಳ್ಳವರು ಬಹಿರಂಗ ಹರಾಜಿನಲ್ಲಿ ಭಾಗವಹಿಸಿ ಅತ್ಯಧಿಕ ಸವಾಲ್ ಮಾಡಿ ಈ ಕೆಳಕಂಡ ಸೊತ್ತನ್ನು ಪಡೆಯಬಹುದು.

| ಕ್ರ ಸಂ. | ಬಾಕಿದಾರರ ಹೆಸರು ಮತ್ತು ಇ.ಪಿ. ಸಂಖ್ಯೆ | ಬಾಕಿ ಮೊತ್ತ (ಅಸಲು+ಬಡ್ಡಿ+ಇತರೆ ಖರ್ಚು) | ಬಹಿರಂಗ ಹರಾಜು ಮಾಡಲ್ಪಡುವ ಸ್ಥಿರ ಸೊತ್ತುಗಳ ವಿವರ | ಬಹಿರಂಗ ಹರಾಜು ಮಾಡಲ್ಪಡುವ ಸ್ಥಳ , ದಿನಾಂಕ ಮತ್ತು ಸಮಯ | ಪಾವತಿಸಬೇಕಾದ ಮುಂಗಡ ಠೇವಣಿ |
|---|---|---|---|---|---|
| 1 | ಮೆ॥ ಎನ್.ಎನ್. ಏಜೆನ್ಸಿಸ್, ಮಾಲೀಕರು : 1) ಶ್ರೀಮತಿ ಪುಷ್ಪಾ ಜಿ.ಎಸ್. ಕೋಂ ಲೇಟ್ ಸಿದ್ದೇಶ್ ಜಿ.ಎಸ್., 2) ನಿಖಿಲ್ ಜಿ.ಎಸ್. ಬಿನ್ ಲೇಟ್ ಸಿದ್ದೇಶ್ ಜಿ.ಎಸ್., 3) ನಿತಿನ್ ಜಿ.ಎಸ್ ಬಿನ್ ಲೇಟ್ ಸಿದ್ದೇಶ್ ಜಿ.ಎಸ್. ಇ.ಪಿ. ಸಂಖ್ಯೆ 18/2022–23 | ರೂ. 4,72,61,729–00 + ಇತರೆ ಖರ್ಚು (25–05–2023ರ ವರೆಗೆ) | ದಾವಣಗೆರೆ ನಗರ ಎಂ.ಸಿ.ಸಿ. ಬಿ ಬ್ಲಾಕ್, 6ನೇ ಮುಖ್ಯರಸ್ತೆ, 5ನೇ ಕ್ರಾಸ್‌ನಲ್ಲಿ ಬರತಕ್ಕ ಡೋರ್ ನಂ.3581ರ ಖಾಲಿ ನಿವೇಶನ ಇದರ ಅಳತೆ 140X80 ಅಡಿಗಳು. ಸೊತ್ತಿಗೆ ಚಕ್ಕುಬಂದಿ:–ಪೂರ್ವಕ್ಕೆ : ಖಾಸಗಿ ಕಟ್ಟಡ, ಪಶ್ಚಿಮಕ್ಕೆ :6ನೇ ಮುಖ್ಯರಸ್ತೆ, ಉತ್ತರಕ್ಕೆ : ಖಾಲಿ ನಿವೇಶನ, ದಕ್ಷಿಣಕ್ಕೆ: ಖಾಸಗಿ ಕಟ್ಟಡ. | ದಿನಾಂಕ 30–06–2023ನೇ ಶುಕ್ರವಾರ ಮಧ್ಯಾಹ್ನ 12–00 ಗಂಟೆಗೆ ಹರಾಜಿಗೆ ಒಳಪಟ್ಟ ಸೊತ್ತಿನ ಮುಂಭಾಗದಲ್ಲಿ | 1,00,000=00 |
| 2 | ಶ್ರೀ ಹೆಚ್. ಶಿವಕುಮಾರ್ ಬಿನ್ ಹುಚ್ಚಿಂಗಪ್ಪ ಇ.ಪಿ. ಸಂ. 19/2022–23 | ರೂ. 5,55,094–00 + ಇತರೆ ಖರ್ಚು (21–05–2023ರ ವರೆಗೆ) | ದಾವಣಗೆರೆ ತಾಲ್ಲೂಕು ಸಬ್ ರಿಜಿಸ್ಟ್ರಾರ್‌ರವರ ಕಛೇರಿಯ ವ್ಯಾಪ್ತಿಗೆ ಒಳಪಟ್ಟ ದಾವಣಗೆರೆ ಸಿಟಿ, 3ನೇ ವಾರ್ಡ್, 3ನೇ ಡಿವಿಜನ್, ಗಾಂಧಿನಗರದಲ್ಲಿರುವ ಮುನಿಸಿಪಾಲ್ ಚಾಲ್ತಿ ಡೋರ್ ನಂ. 1322, ಅಳತೆ 25+24 3/4/2X15 ಅಡಿಗಳ ಜಾಗ, ಸದರಿ ಸೊತ್ತಿನ ಚೆಕ್ಕುಬಂದಿ :– ಪೂರ್ವ: ಮುಖ್ಯರಸ್ತೆ, ಪಶ್ಚಿಮ : ಕೆಂಚಪ್ಪನವರ ಬಾಬ್ತು ಮನೆ, ಉತ್ತರ ಕನ್ಸರ್‌ವೆನ್ಸಿ ರಸ್ತೆ, ದಕ್ಷಿಣ :ಮುಖ್ಯರಸ್ತೆ. | ದಿನಾಂಕ 23–06–2023ನೇ ಶುಕ್ರವಾರ ಮಧ್ಯಾಹ್ನ 12–00 ಗಂಟೆಗೆ ಬಾಪೂಜಿ ಕೋ–ಆಪರೇಟಿವ್ ಬ್ಯಾಂಕ್ ಲಿ., ಹದಡಿ ರಸ್ತೆ ಶಾಖಾ ಮುಂಭಾಗದಲ್ಲಿ. | 50,000=00 |

**ಹರಾಜಿನ ಷರತ್ತುಗಳು :–** (1) ಹರಾಜಿನಲ್ಲಿ ಭಾಗವಹಿಸುವವರು ಹರಾಜು ಸ್ಥಳದಲ್ಲಿ ಮುಂಗಡ ಠೇವಣಿಯನ್ನು ಡಿ.ಡಿ. / ನಗದು ಮುಖಾಂತರ ಪಾವತಿಸಬೇಕು(ಪ್ರಧಾನ ವ್ಯವಸ್ಥಾಪಕರು ಬಾಪೂಜಿ ಕೋ–ಆಪರೇಟಿವ್ ಬ್ಯಾಂಕ್ ಲಿ., ಇವರ ಹೆಸರಿಗೆ) ಇದನ್ನು ಹರಾಜಿನ ಸಮಯಕ್ಕೆ ಅರ್ಧ ಗಂಟೆಗೆ ಮುಂಚಿತವಾಗಿ ಪಾವತಿಸಿ ತಮ್ಮ ವೈಯಕ್ತಿಕ ಮಾಹಿತಿ (ಆಧಾರ ಕಾರ್ಡ್ ಹಾಗೂ ಪಾನ್ ಕಾರ್ಡ್ ಪ್ರತಿಯೊಂದಿಗೆ) ಸಲ್ಲಿಸಿ ಬಿಡ್ಡುದಾರರೆಂದು ನೋಂದಾಯಿಸಿಕೊಳ್ಳಬೇಕು. (2) ಸವಾಲಿನಲ್ಲಿ ಭಾಗವಹಿಸಲು ಇಚ್ಛಿಸುವವರು ಸದರಿ ನಿಯಮಾವಳಿಗೆ ಒಳಪಟ್ಟಿರತಕ್ಕದ್ದು. (3) ಹರಾಜಿಗೆ ಮುನ್ನ ಬ್ಯಾಂಕಿಗೆ ಬರಬೇಕಾದ ಹಣ ಮರುಪಾವತಿಯಾದಲ್ಲಿ ಸದರಿಯವರ ಸ್ವತ್ತನ್ನು ಹರಾಜು ಮಾಡಲಾಗುವುದಿಲ್ಲ. (4) ನಿಗದಿಪಡಿಸಿದ ಸಮಯದ ನಂತರ ಬಂದ ಠೇವಣಿಗಳನ್ನು ಸ್ವೀಕರಿಸುವುದಿಲ್ಲ. (5) ಅಧಿಕೃತ ಸವಾಲ್ ಮಾಡಿ ಸ್ಥಿರಾಸ್ತಿಯನ್ನು ಕೊಳ್ಳುವವರು ಮಾರಾಟಾಧಿಕಾರಿಯವರು ಹರಾಜು ಒಪ್ಪಿದ ತಕ್ಷಣ ಹರಾಜು ಮೊಬಲಗಿನ ಶೇಕಡ 15ರಷ್ಟು ಮೊತ್ತವನ್ನು ಕೂಡಲೇ ಪಾವತಿ ಮಾಡತಕ್ಕದ್ದು. ಉಳಿದ ಹಣವನ್ನು ಮತ್ತು ಸ್ಟಾಂಪ್‌ಪೇಪರ್ ಮೊಬಲಗನ್ನು 45 ದಿನಗಳೊಳಗಾಗಿ ಪಾವತಿ ಮಾಡತಕ್ಕದ್ದು. ತಪ್ಪಿದಲ್ಲಿ ಪಾವತಿ ಮಾಡಿರುವ ಹಣವನ್ನು ಮುಟ್ಟುಗೋಲು ಮಾಡಿಕೊಳ್ಳಲಾಗುವುದು. (6) ಹರಾಜಿಗಿಟ್ಟ ಸ್ಥಿರ ಸ್ವತ್ತಿನ ವಿವರಣೆ ಅಂದಾಜು ವಿಸ್ತೀರ್ಣದ ವಿಷಯದಲ್ಲಿ ವ್ಯತ್ಯಾಸ ಉಂಟಾದರೆ ಬ್ಯಾಂಕ್ ಜವಾಬ್ದಾರರಾಗಿರುವುದಿಲ್ಲ. (7) ಸವಾಲುದಾರರು ಹರಾಜನ್ನು ಪ್ರಾರಂಭಿಸುವುದಕ್ಕೆ ಮುನ್ನವೇ ಕಟ್ಟಡ/ಸ್ವತ್ತನ್ನು ಪರಿಶೀಲಿಸಿ ಹರಾಜಿನಲ್ಲಿ ಭಾಗವಹಿಸತಕ್ಕದ್ದು. (8) ಒಂದು ವೇಳೆ ಸುಸ್ತಿ ಸಾಲಗಾರರು 45 ದಿನಗಳೊಳಗಾಗಿ ಇತರೆ ಎಲ್ಲಾ ಖರ್ಚುಗಳೊಂದಿಗೆ ಸಂಪೂರ್ಣ ಹಣ ಪಾವತಿ ಮಾಡಿದಾಗ ಹರಾಜಿನಲ್ಲಿ ಒಪ್ಪಿಕೊಂಡ ಖರೀದಿದಾರರಿಗೆ ಶೇಕಡ 5ರಂತೆ ಮಾರಾಟ ಮಾಡಿದ ಹಣಕ್ಕೆ ಸಮಾಧಾನಾರ್ಥವಾಗಿ ಪರಿಹಾರವನ್ನು ಕರ್ನಾಟಕ ಸಹಕಾರಿ ನಿಯಮ 60, ನಿಯಮ 38(4)(1)ರ ಪ್ರಕಾರ ಸುಸ್ತಿಸಾಲಗಾರರಿಂದ ಕೊಡಿಸಲಾಗುವುದು. (9) ಮೇಲೆ ಕಾಣಿಸಿದಂತೆ ಸ್ಥಿರಾಸ್ತಿ ಹರಾಜಿನ ಹಣವನ್ನು ನಿಗದಿಪಡಿಸಿದ ಸಮಯಕ್ಕೆ ಸರಿಯಾಗಿ ಕಟ್ಟಲು ತಪ್ಪಿದಲ್ಲಿ ಹರಾಜನ್ನು ರದ್ದುಪಡಿಸಿ ಕಟ್ಟಿರುವ ಹಣವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು ಮತ್ತು ಬಿಡ್ಡುದಾರರಿಗೆ ಇದರ ಮೇಲೆ ಯಾವುದೇ ಹಕ್ಕು ಇರುವುದಿಲ್ಲ. (10) ಎಲ್ಲಾ ವಿಧವಾದ ಸ್ಟಾಂಪ್ ಡ್ಯೂಟಿ, ತೆರಿಗೆ, ಕಾನೂನು ಖರ್ಚು, ರಿಜಿಸ್ಟ್ರೇಷನ್ ಫೀ, ಬಾಕಿ ಇರುವ ವಿದ್ಯುತ್ ಬಿಲ್, ದೂರವಾಣಿ ಬಿಲ್, ಕಂದಾಯ ಮತ್ತು ನೀರಿನ ಕಂದಾಯ, ಇತರೆ ಖರ್ಚುಗಳನ್ನು ಸಹ ಖರೀದಿದಾರರೇ ಭರಿಸತಕ್ಕದ್ದು. (11) ಸ್ಥಿರಾಸ್ತಿಯು ಹರಾಜು ನಡೆಯುವ ದಿನ ಯಾವ ರೀತಿ ಇರುತ್ತದೆಯೋ ಮತ್ತು ಹೇಗಿರುತ್ತದೆಯೋ ಹಾಗೆಯೇ ಇರುವ ಸ್ಥಿತಿಯಲ್ಲಿ ಮಾರಾಟ ಮಾಡಲಾಗುವುದು. (12) **ಯಾವುದೇ ಕಾರಣ ನೀಡದೇ ಹರಾಜನ್ನು ಒಪ್ಪುವ ಅಥವಾ ತಿರಸ್ಕರಿಸುವ ಅಧಿಕಾರ ಮಾರಾಟಾಧಿಕಾರಿಗಳ ಅಧೀನಕ್ಕೆ ಒಳಪಟ್ಟಿರುತ್ತದೆ.** (13) ಮೇಲ್ಕಾಣಿಸಿದ ಸ್ಥಿರಾಸ್ತಿಯನ್ನು ಪರಿಶೀಲಿಸಲು ಹಾಗೂ ಹೆಚ್ಚಿನ ಮಾಹಿತಿಗಾಗಿ ಬ್ಯಾಂಕಿನ ಮಾರಾಟಾಧಿಕಾರಿ/ಪ್ರಧಾನ ವ್ಯವಸ್ಥಾಪಕರನ್ನು ಈ ಜಾಹೀರಾತು ಬಂದ ದಿನಾಂಕದಿಂದ ಹರಾಜಿನ ದಿನಾಂಕದವರೆಗೆ ಬೆಳಿಗ್ಗೆ 11–00 ಘಂಟೆಯಿಂದ ಸಂಜೆ 5–00 ಘಂಟೆಯೊಳಗೆ ಸಂಪರ್ಕಿಸಿ ಪರಿಶೀಲಿಸಬಹುದು. (14) ಯಾವುದೇ ತಕರಾರಿದ್ದಲ್ಲಿ ಸಹಕಾರ ಸಂಘಗಳ ಕಾಯಿದೆ, ನಿಯಮಗಳ ಪ್ರಕಾರ ಇತ್ಯರ್ಥಗೊಳಿಸಲಾಗುವುದು.

ದಿನಾಂಕ : 09–06–2023
ಸ್ಥಳ : ದಾವಣಗೆರೆ

ಸಹಿ/–
**ಪ್ರಧಾನ ವ್ಯವಸ್ಥಾಪಕರು**

ಸಹಿ/–
ಸಹಕಾರ ಸಂಘಗಳ ಸಹಾಯಕ ನಿಬಂಧಕರು ಹಾಗೂ ವಸೂಲಾತಿ ಅಧಿಕಾರಿ,
ದಾವಣಗೆರೆ ಇವರ ಆದೇಶದ ಮೇರೆಗೆ
**ಮಾರಾಟಾಧಿಕಾರಿ, (ನಿ.441)**
ಬಾಪೂಜಿ ಕೋ ಆಪರೇಟಿವ್ ಬ್ಯಾಂಕ್ ಲಿ.,ದಾವಣಗೆರೆ.

# ಎಲ್ಲಾ ಸಮುದಾಯದ ರೈತರಿಗೆ ಸಾಲ ಸೌಲಭ್ಯ ಸಿಗಲಿ



ಚನ್ನಗಿರಿ ತಾಲ್ಲೂಕಿನ ಗುಡ್ಡದಕೊಮಾರನಹಳ್ಳಿ ಗ್ರಾಮದಲ್ಲಿ ಶುಕ್ರವಾರ ಸಹಕಾರಿ ಬಂಧು ದಿ.ಕೆ.ಜಿ.ತಿಮ್ಮಪ್ಪನವರ ಪ್ರತಿಮೆ ಅನಾವರಣ ಕಾರ್ಯಕ್ರಮದಲ್ಲಿ ಮಾಯಕೊಂಡ ಕ್ಷೇತ್ರದ ಶಾಸಕ ಕೆ.ಎಸ್. ಬಸವಂತಪ್ಪ

ದಾವಣಗೆರೆ, ಜೂ. 9- ಮಾಯಕೊಂಡ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘಗಳಲ್ಲಿ ಎಲ್ಲಾ ಸಮುದಾಯ ಗಳ ರೈತರಿಗೆ ಸಾಲ ಸೌಲಭ್ಯ ಸಿಗಬೇಕು. ರೈತರಿಂದ ದೂರು ಬಂದರೆ ನಾನು ರೈತರಿಗೆ ಅನ್ಯಾಯವಾಗಲು ಬಿಡುವುದಿಲ್ಲ ಎಂದು ಮಾಯಕೊಂಡ ಶಾಸಕ ಕೆ.ಎಸ್. ಬಸವಂತಪ್ಪ ಹೇಳಿದರು.

ಮಾಯಕೊಂಡ ವಿಧಾನಸಭಾ ಕ್ಷೇತ್ರದ ಚನ್ನಗಿರಿ ತಾಲ್ಲೂಕಿನ ಗುಡ್ಡದಕೊಮಾರನಹಳ್ಳಿ ಗ್ರಾಮದಲ್ಲಿ ಶುಕ್ರವಾರ ಸಹಕಾರಿ ಬಂಧು ದಿ.ಕೆ.ಜಿ. ತಿಮ್ಮಪ್ಪನವರ ಪ್ರತಿಮೆ ಅನಾವರಣ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘಗಳಲ್ಲಿ ಕೆಲವು ರೈತರಿಗೆ ಸಾಲಸೌಲಭ್ಯ ಸಿಗುತ್ತಿಲ್ಲ ಎಂಬ ಬಗ್ಗೆ ಸಾಕಷ್ಟು ದೂರುಗಳು ಇವೆ. ಇದು ಆಗಬಾರದು. ರೈತರು ಎಷ್ಟೇ ಜಮೀನು ಹೊಂದಿದ್ದರೂ ಅವರಿಗೆ ಸಾಲಸೌಲಭ್ಯ ಸಿಗಬೇಕು. ಜತೆಗೆ ಸರ್ಕಾರದ ಸೌಲಭ್ಯಗಳು ತಲುಪಬೇಕು. ಯಾರಿಗೂ ಅನ್ಯಾಯವಾಗಲು ಬಿಡುವುದಿಲ್ಲ. ನೀವು ನನ್ನನ್ನು ನಂಬಿ ಮತ ಹಾಕಿದ್ದೀರಿ. ನಿಮಗೆ ಸರ್ಕಾರದ ಸೌಲಭ್ಯಗಳನ್ನು ತಲುಪಿಸಲು ಪ್ರಾಮಾಣಿಕ ಕೆಲಸ ಮಾಡುತ್ತೇನೆ ಎಂದರು.

ಸರ್ಕಾರಿ ಬಸ್ ಸೌಲಭ್ಯ, ವಿದ್ಯಾರ್ಥಿಗಳಿಗೆ ಹಾಸ್ಟೆಲ್ ಸೌಲಭ್ಯ ಕಲ್ಪಿಸಬೇಕೆಂಬುದು ಸಹಕಾರಿ ಬಂಧು ದಿ.ಕೆ.ಜಿ.ತಿಮ್ಮಪ್ಪನವರ ಕನಸು ಆಗಿತ್ತು ಎಂಬುದು ಗ್ರಾಮಸ್ಥರ ಆಶಯವಾಗಿದೆ. ಅವರು ಮಾಡಿರುವ ಒಳ್ಳೆಯ ಕೆಲಸಗಳಿಂದ ಇಂದು ಇಲ್ಲಿ ಅವರ ಪ್ರತಿಮೆ ಸ್ಥಾಪನೆ ಆಗಿದೆ. ಹೀಗಾಗಿ ನಾನು ಕೂಡ ಅವರ ಶಿಷ್ಯನಾಗಿ ಈ ಭಾಗಕ್ಕೆ ಬಸ್ ಸೌಲಭ್ಯ, ಹಾಸ್ಟೆಲ್ ಸೌಲಭ್ಯ ಕಲ್ಪಿಸಿ, ಅವರ ಕನಸು ನನಸು ಮಾಡುತ್ತೇನೆ ಎಂದು ಭರವಸೆ ನೀಡಿದರು.

ಮಾಯಕೊಂಡ ಕ್ಷೇತ್ರದ ಕಾಡಂಚಿನ ಭಾಗಗಳಲ್ಲಿ ಚಿರತೆ ಸೇರಿದಂತೆ ಸಾಕಷ್ಟು ಕಾಡು ಪ್ರಾಣಿಗಳ ದಾಳಿ ಹೆಚ್ಚಾಗುತ್ತಿದೆ. ಈ ಬಗ್ಗೆ ಜಿಲ್ಲಾಧಿಕಾರಿಗಳೊಂದಿಗೆ ಚರ್ಚೆ ನಡೆಸಿ ಈ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವ ಕೆಲಸ ಮಾಡುತ್ತೇನೆ. ಕ್ಷೇತ್ರದ ಜನರ ಏನೇ ಸಮಸ್ಯೆಗಳಿದ್ದರೂ ಆ ಸಮಸ್ಯೆಗಳಿಗೆ ಸ್ಪಂದಿಸುವ ಪ್ರಾಮಾಣಿಕ ಕೆಲಸ ಮಾಡುತ್ತೇನೆ ಎಂದು ಅಭಯ ನೀಡಿದರು.

ಈ ಸಂದರ್ಭದಲ್ಲಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಕೆ. ರಾಜಪ್ಪ ಅಧ್ಯಕ್ಷತೆ ವಹಿಸಿದ್ದರು. ಮಾಜಿ ಶಾಸಕ ಪ್ರೊ.ಎನ್.ಲಿಂಗಣ್ಣ, ಗುಡ್ಡದಕೊಮಾರನಹಳ್ಳಿ ಗ್ರಾಪಂ ಅಧ್ಯಕ್ಷ, ಆರ್.ಮಂಜುನಾಥ ರುದ್ರಪ್ಪ, ಜೆ.ಆರ್. ಷಣ್ಮುಖಪ್ಪ, ಜಿ.ಎನ್.ಸ್ವಾಮಿ, ಬಸವಾಪಟ್ಟಣ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬಿ.ಜಿ.ನಾಗಣ್ಣ ಸೇರಿದಂತೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನಿರ್ದೇಶಕರು, ಗ್ರಾಮಸ್ಥರು ಭಾಗವಹಿಸಿದ್ದರು.

# ನಾಲ್ವಡಿ ಕೃಷ್ಣರಾಜ ಒಡೆಯರ್ ದತ್ತಿ ಪ್ರಶಸ್ತಿಗೆ ಡಾ.ತೇಜಸ್ವಿ ಕಟ್ಟೀಮನಿ ಆಯ್ಕೆ



ಬೆಂಗಳೂರು, ಜೂ. 9- ಕನ್ನಡ ಸಾಹಿತ್ಯ ಪರಿಷತ್ತಿನ ಪ್ರತಿಷ್ಠಿತ ದತ್ತಿ ಪ್ರಶಸ್ತಿಗಳಲ್ಲಿ ಒಂದಾಗಿರುವ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ದತ್ತಿ ಪ್ರಶಸ್ತಿ ಪ್ರಕಟವಾಗಿದೆ. ನಾಡಿನ ಹಿರಿಯ ಶಿಕ್ಷಣ ತಜ್ಞ, ಲೇಖಕ, ಜನಪದ ವಿದ್ವಾಂಸ, ಅಂಕಣಕಾರರಾದ ಡಾ. ತೇಜಸ್ವಿ ಕಟ್ಟೀಮನಿ ಅವರಿಗೆ 2023ನೆಯ ಸಾಲಿನ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ದತ್ತಿ ಪ್ರಶಸ್ತಿಗೆ ಭಾಜನರಾಗಿರುತ್ತಾರೆ ಎಂದು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ನಾಡೋಜ ಡಾ. ಮಹೇಶ ಜೋಶಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಾಲ್ವಡಿಯವರು ನಾಡಿನ ಅಭ್ಯುದಯದ ಕನಸು ಕಂಡವರು. ಅವರ ಆಶಯದಂತೆ ನಾಡಿನಲ್ಲಿ ಕೈಗಾರಿಕಾ ಕ್ಷೇತ್ರ, ಕೃಷಿ, ನೀರಾವರಿ, ವಿದ್ಯುಚ್ಛಕ್ತಿ, ಹಿಂದುಳಿದ ವರ್ಗಗಳ ಕಲ್ಯಾಣ, ಸಾಮಾಜಿಕ ನ್ಯಾಯ, ಮಹಿಳಾ ಸಬಲೀಕರಣ, ಗ್ರಾಮ ನೈರ್ಮಲೀಕರಣ, ವೈದ್ಯಕೀಯ ಕ್ಷೇತ್ರ, ನೀರಿನ ಸೌಕರ್ಯ, ಸಾರಿಗೆ ಸೌಲಭ್ಯ, ವ್ಯಾಪಾರ ಸೇರಿದಂತೆ ನಾಡಿನ ಸರ್ವತೋಮುಖ ಅಭಿವೃದ್ಧಿಯಲ್ಲಿ ಗಣನೀಯ ಸಾಧನೆ ಮಾಡಿರುವ ಗಣ್ಯರೊಬ್ಬರಿಗೆ ಪ್ರತಿ ವರ್ಷ ಪ್ರಸ್ತುತ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ದತ್ತಿ ಪ್ರಶಸ್ತಿಯನ್ನು ನೀಡಬೇಕು ಎನ್ನುವ ಮೂಲ ಆಶಯ ಈ ದತ್ತಿ ಪ್ರಶಸ್ತಿಯದ್ದಾಗಿದೆ. ಪ್ರಶಸ್ತಿಯು 51,000 (ಐವತ್ತೊಂದು ಸಾವಿರ) ರೂ. ನಗದು, ಸ್ಮರಣಿಕೆ, ಫಲ ತಾಂಬೂಲ ಗಳನ್ನು ಒಳಗೊಂಡಿ ರುತ್ತದೆ ಎಂದು ಜೋಶಿ ತಿಳಿಸಿದ್ದಾರೆ.

ಇದುವರೆಗೂ ನಾಡಿನ 13 ಜನ ಗಣ್ಯರಿಗೆ ಪರಿಷತ್ತಿನ ಪ್ರತಿಷ್ಠಿತ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ದತ್ತಿ ಪ್ರಶಸ್ತಿ ಪ್ರದಾನ ಮಾಡಲಾಗಿದೆ. 2023ನೇ ಸಾಲಿನ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ದತ್ತಿ ಪ್ರಶಸ್ತಿಗೆ ಆಯ್ಕೆಯಾಗಿರುವ ಡಾ. ತೇಜಸ್ವಿ ಕಟ್ಟೀಮನಿ ಅವರು ಮೂಲತಃ ಕೊಪ್ಪಳ ಜಿಲ್ಲೆಯ ಅಳವಂಡಿ ಗ್ರಾಮದವರು. ಕೇಂದ್ರಿಯ ಬುಡಕಟ್ಟು ವಿಶ್ವ ವಿದ್ಯಾಲಯದ ಕುಲಪತಿಗಳಾಗಿ ಸೇವೆ ಸಲ್ಲಿಸುತ್ತಿರುವ ಡಾ. ಕಟ್ಟೀಮನಿಯವರು ಕನ್ನಡ ಸಾರಸ್ವತ ಲೋಕಕ್ಕೆ ಅಪಾರ ಕೊಡುಗೆ ನೀಡಿದ್ದಾರೆ. ರಿವಾಯತ್ ಪದಗಳು, ಜ್ಯೋತಿಬಾ ಫುಲೆ (ರೇಖಾಚಿತ್ರ), ಮುಂಗಾರು ಮಳೆ, ಮಂಡಲ ಕಮೀಷನ್: ಒಂದು ಅಧ್ಯಯನ, ಹುಡುಗಿ ಪ್ರೀತಿಸುವುದೇ ಹೀಗೆ (ಮೂಲ ಕವಿತೆಗಳ ಸಂಗ್ರಹ), ಕತ್ತಲೆಯ ಅಳಿವಿನಾಚೆ (ಲೇಖನಗಳ ಸಂಗ್ರಹ) , ಕನ್ನಡದಿಂದ ಹಿಂದಿಗೆ ಅನುವಾದಿತ: ಪಿ. ಲಂಕೇಶ್ ಕಾ ಕಥಾ ಸಾಹಿತ್ಯ, ಅನುವಾದ ಕೆ. ವಿವಿಧ ಆಯಾಮ, ವಸ್ತುನಿಷ್ಠ ಹಿಂದಿ ಪ್ರತಿಯೋಗಿತಾ, ಜಲಗೀತ, ಸೃಷ್ಟಿ ಔರ್ ದೃಷ್ಟಿ, ಹಿಂದಿಯಿಂದ ಕನ್ನಡಕ್ಕೆ: ಗಾಂವ್ ಗಲಿ (ಸಿದ್ಧಲಿಂಗ್ಯ ಅವರ ಆತ್ಮಕಥೆಯ ಹಿಂದಿ ಅವತರಣಿಕೆ) ಜಂಗಲ್ ಕಿ ಮೋಹಿನಿ ಡಾ. ಬುದ್ದಣ್ಣ ಹಿಂಗಮಿರೆ ಅವರ ಕಾವ್ಯ ನಾಟಕ ಸೇರಿ ಕನ್ನಡ ಹಾಗೂ ಇಂಗ್ಲಿಷ್, ಗುಜರಾತಿ ಹೀಗೆ ಇತರೆ ಭಾಷೆಗಳ ಕೃತಿಗಳನ್ನು ಭಾಷಾಂತರಿಸಿದ್ದಾರೆ. ಹೀಗೆ ಅವರು ಬಹುಮುಖಿ ಕೊಡುಗೆಯನ್ನು ನಾಡಿಗೆ ನೀಡಿದ್ದಾರೆ ಎಂದು ಜೋಶಿ ತಿಳಿಸಿದ್ದಾರೆ.

ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಮಹೇಶ ಜೋಶಿ ಅವರ ಅಧ್ಯಕ್ಷತೆಯಲ್ಲಿ ನಡೆದ ಆಯ್ಕೆ ಸಮಿತಿಯಲ್ಲಿ ಇತಿಹಾಸ ತಜ್ಞ ಹಾಗೂ ಸಂಶೋಧಕ ಡಾ. ತಲಕಾಡು ಚಿಕ್ಕರಂಗೇಗೌಡ, ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕಾರ್ಯದರ್ಶಿಗಳಾದ ನೇ.ಭ. ರಾಮಲಿಂಗ ಶೆಟ್ಟಿ, ಡಾ. ಪದ್ಮಿನಿ ನಾಗರಾಜು ಹಾಗೂ ಗೌರವ ಕೋಶಾಧ್ಯಕ್ಷರಾದ ಡಾ. ಬಿ.ಎಂ. ಪಟೇಲ್ ಪಾಂಡು ಅವರು ಉಪಸ್ಥಿತರಿದ್ದರು.

# ಮಾಗನೂರು ಬಸಪ್ಪ ಶಾಲೆಯಲ್ಲಿ ಇಂದು ವ್ಯಕ್ತಿತ್ವ ವಿಕಸನ ಕಾರ್ಯಾಗಾರ

ವಿದ್ಯಾನಗರದ ಮಾಗನೂರು ಬಸಪ್ಪ ವಿದ್ಯಾಸಂಸ್ಥೆಯಲ್ಲಿ ಇಂದು ಬೆಳಿಗ್ಗೆ 10 ರಿಂದ 1 ರ ವರೆಗೆ ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳಿಗೆ ವ್ಯಕ್ತಿತ್ವ ವಿಕಸನ ಕಾರ್ಯಾಗಾರ ಆಯೋಜಿಸಲಾಗಿದೆ. 'ಕನಸು ಯಶಸ್ಸಿನ ಕೀಲಿ ಕೈ' ಹಾಗೂ 'ಪ್ರೇರಣೆ - ಮಾರ್ಗ ತೋರುವ ದಾರಿ ದೀಪ' ಎಂಬಿತ್ಯಾದಿ ಅಡಿ ಬರಹದಡಿ ಸಂಪನ್ಮೂಲ ವ್ಯಕ್ತಿ ಗಂಗಾಧರ ಬಿ.ಎಲ್. ನಿಟ್ಟೂರ್ ವ್ಯಕ್ತಿತ್ವ ವಿಕಸನ ಕಾರ್ಯಾಗಾರ ನಡೆಸಿಕೊಡುವರು. ಸಂಸ್ಥೆಯ ಆಡಳಿತಾಧಿಕಾರಿ ಎಸ್.ಆರ್. ಸಿರಗಂಬಿ, ಪ್ರಾಂಶುಪಾಲರಾದ ಕುಸುಮಾ, ಮುಖ್ಯೋಪಾಧ್ಯಾಯ ಮಂಜುನಾಥ್ ಜಿ. ಪಾಲ್ಗೊಳ್ಳುವರು.

# ಪತ್ರಕರ್ತರ ಧ್ವನಿ ಸಂಘಟನೆಯ ಸಭೆ



ದಾವಣಗೆರೆ, ಜೂ.9- ರಾಜ್ಯ ಕಾರ್ಯನಿರತ ಪತ್ರಕರ್ತರ ಧ್ವನಿ ಸಂಘಟನೆಯ ಸಭೆಯು ನಗರದ ಪ್ರವಾಸಿ ಮಂದಿರದಲ್ಲಿ ರಾಜ್ಯಾಧ್ಯಕ್ಷ ಮಲ್ಲಿಕಾರ್ಜುನ್ ಬಂಗ್ಲೆ, ಉಪಾಧ್ಯಕ್ಷ ಬಿ.ವಾಸುದೇವ್, ಜಿಲ್ಲಾಧ್ಯಕ್ಷ ಜಿ.ಹೆಚ್. ನಾಗರಾಜು ಅವರುಗಳ ಅಧ್ಯಕ್ಷತೆಯಲ್ಲಿ ನಡೆಯಿತು.

ಮಲ್ಲಿಕಾರ್ಜುನ್ ಬಂಗ್ಲೆ ಮಾತನಾಡಿ, ಪತ್ರಕರ್ತರಿಗೆ ಜೀವ ಬೆದರಿಕೆ ಹಾಕುವುದು, ಹಲ್ಲೆ ನಡೆಸುವುದು ಇಂತಹ ಕೃತ್ಯಗಳ ಬಗ್ಗೆ ಹೋರಾಟ ನಡೆಸಿ, ಸರ್ಕಾರದ ಗಮನಕ್ಕೆ ತಂದು ಸೂಕ್ತ ಕ್ರಮ ಕೈಗೊಳ್ಳಲು ಹೋರಾಟ ನಡೆಸಬೇಕಾಗಿದೆ.

ಪತ್ರಕರ್ತರು ಅನಾರೋಗ್ಯ ಪೀಡಿತ ರಾಗಿದ್ದಲ್ಲಿ ಅವರ ಕುಟುಂಬದ ನಿರ್ವಹಣೆಗೆ ಆರ್ಥಿಕ ತೊಂದರೆ ಉಂಟಾಗುವ ಸಾಧ್ಯತೆ ಯಿದ್ದು, ಅವರಿಗೆ ಸೂಕ್ತ ಚಿಕಿತ್ಸೆ ಪಡೆಯಲು ಆರೋಗ್ಯ ಭಾಗ್ಯ ದೊರಕುವಂತೆ ಸೂಕ್ತ ಕ್ರಮವನ್ನು ಕೈಗೊಳ್ಳಬೇಕಾಗಿದೆ ಎಂದು ಹೇಳಿದರು. ಗೌರವ ಅಧ್ಯಕ್ಷ ವಕೀಲ ರೇವಣ್ಣ ಬಳ್ಳಾರಿ ಮಾತನಾಡಿದರು.

# ಬಿಸಿಯೂಟ ತಯಾರಕರ ವೇತನ ಹೆಚ್ಚಿಸಲು 13ರಂದು ಡಿಸಿ ಕಚೇರಿ ಬಳಿ ಹೋರಾಟ

ದಾವಣಗೆರೆ, ಜೂ. 9- ಶಾಲೆಗಳಲ್ಲಿ ಅಡುಗೆ ಕೆಲಸ ಮಾಡುತ್ತಿರುವ ಬಿಸಿಯೂಟ ತಯಾರಕರ ವೇತನವನ್ನು ಆರು ಸಾವಿರ ರೂಪಾಯಿಗಳಿಗೆ ಹೆಚ್ಚಿಸಲು ರಾಜ್ಯ ಸರ್ಕಾರಕ್ಕೆ ಒತ್ತಾಯಿಸಿ, ರಾಜ್ಯಾದ್ಯಂತ ಇದೇ ದಿನಾಂಕ 13 ರಂದು ಹೋರಾಟ ಮಾಡಲು ರಾಜ್ಯ ಸಮಿತಿ ಕರೆ ನೀಡಿದೆ ಎಂದು ಬಿಸಿಯೂಟ ತಯಾರಕರ ಫೆಡರೇಷನ್ ಸಮಿತಿ ರಾಜ್ಯ ಪ್ರಧಾನ ಕಾರ್ಯದರ್ಶಿ ಕಾಂ. ಆವರಗೆರೆ ಚಂದ್ರು ತಿಳಿಸಿದ್ದಾರೆ.

13ರ ಮಂಗಳವಾರ ಬೆಳಿಗ್ಗೆ 11 ಗಂಟೆಗೆ ದಾವಣಗೆರೆ ಜಿಲ್ಲಾಧಿಕಾರಿಗಳ ಕಚೇರಿ ಬಳಿ ಸೇರಿ ದಾವಣಗೆರೆ ಜಿಲ್ಲೆಯ ಬಿಸಿಯೂಟ ತಯಾರಕರು ಜಿಲ್ಲಾಧಿಕಾರಿಗಳ ಮೂಲಕ ಮುಖ್ಯಮಂತ್ರಿಗಳಿಗೆ ಮತ್ತು ಶಿಕ್ಷಣ ಮಂತ್ರಿಗಳಿಗೆ ಮನವಿ ಸಲ್ಲಿಸಲಿದ್ದಾರೆ.

ಜುಲೈ 7ರಂದು ರಾಜ್ಯ ಸರ್ಕಾರ ಮಂಡಿಸುವ ಬಜೆಟ್ ನಲ್ಲಿ ಬಿಸಿಯೂಟ ತಯಾರಕರಿಗೆ ಚುನಾವಣೆ ಸಂದರ್ಭದಲ್ಲಿ ಕಾಂಗ್ರೆಸ್ ಪಕ್ಷ ನೀಡಿದ ಭರವಸೆಯಂತೆ 6ನೇ ಗ್ಯಾರಂಟಿಯಾಗಿ ಬಿಸಿಯೂಟ ತಯಾರಕರಿಗೆ ಈ ಬಜೆಟ್ ನಲ್ಲಿ ವೇತನವನ್ನು 6,000 ರೂ.ಗಳಿಗೆ ಹೆಚ್ಚಿಸಬೇಕೆಂದು ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸುವ ಮೂಲಕ ರಾಜ್ಯ ಸರ್ಕಾರಕ್ಕೆ ಒತ್ತಾಯಿಸಲಾಗುವುದು. ಆದ್ದರಿಂದ ದಾವಣಗೆರೆ ಜಿಲ್ಲೆಯ ತಾಲ್ಲೂಕುಗಳ ಬಿಸಿಯೂಟ ತಯಾರಕರು ಅಂದು ಬೆಳಿಗ್ಗೆ 11 ಗಂಟೆಗೆ ದಾವಣಗೆರೆ ಜಿಲ್ಲಾಧಿಕಾರಿಗಳ ಕಚೇರಿ ಬಳಿ ಆಗಮಿಸಬೇಕೆಂದು ಸಂಘಟನೆ ಕರೆ ನೀಡಿದೆ.

# ಹೊಲದಲ್ಲಿ ನಿಲ್ಲಿಸಿದ್ದ ಟ್ರೈಲರ್ ಕಳವು

ದಾವಣಗೆರೆ, ಜೂ.9- ಜಮೀನಿನಲ್ಲಿ ನಿಲ್ಲಿಸಿದ್ದ ಟ್ರ್ಯಾಕ್ಟರ್‌ನ ಟ್ರೈಲರ್ ಕಳುವಾದ ಘಟನೆ ಮಲೇಬೆನ್ನೂರು ಪೊಲೀಸ್ ಠಾಣಾ ವ್ಯಾಪ್ತಿಯ ಉಕ್ಕಡಗಾತ್ರಿ ಗ್ರಾಮದಲ್ಲಿ ನಡೆದಿದೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಉಕ್ಕಡಗಾತ್ರಿಯ ಕರಿಬಸಪ್ಪ ದೂರು ದಾಖಲಿಸಿದ್ದಾರೆ.

# ಮುದಹದಡಿ ಗ್ರಾಮದಲ್ಲಿ ಇಂದು

ದಾವಣಗೆರೆ ತಾಲ್ಲೂಕಿನ ಮುದಹದಡಿ ಗ್ರಾಮದಲ್ಲಿ ಇಂದು ಬೆಳಿಗ್ಗೆ 11 ಗಂಟೆಗೆ ಸ್ವಯಂ ಸೇವಕರ ನೋಂದಣಿ ಮತ್ತು ಗ್ರಾಮದಲ್ಲಿ ಪಥಸಂಚಲನ ಹಮ್ಮಿಕೊಳ್ಳಲಾಗಿದೆ. ಸಂಜೆ 6 ಗಂಟೆಗೆ ಉದ್ಘಾಟನಾ ಸಮಾರಂಭ ನಡೆಯಲಿದ್ದು, ಶಾಸಕ ಶಾಮನೂರು ಶಿವಶಂಕರಪ್ಪ ಉದ್ಘಾಟಿಸುವರು. ಡಾ. ಅಂಜನಪ್ಪ ಎಸ್.ಆರ್. ಅಧ್ಯಕ್ಷತೆ ವಹಿಸುವರು.

ಕಾರ್ಯಕ್ರಮದಲ್ಲಿ ಡಾ. ನಾರಾಯಣಸ್ವಾಮಿ ಕೆ., ಶ್ರೀಮತಿ ಗೀತಾದೇವಿ ಉಪಸ್ಥಿತರಿರುವರು. ವಿಶೇಷ ಅತಿಥಿಗಳಾಗಿ ಬಸವನಗೌಡ್ರು ಆಗಮಿಸುವರು. ವಿಶೇಷ ಆಹ್ವಾನಿತರಾಗಿ ಡಾ. ಅಶೋಕ್‌ಕುಮಾರ್ ವೀ. ಪಾಳೇದ ಆಗಮಿಸುವರು.

ಮುಖ್ಯ ಅತಿಥಿಗಳಾಗಿ ಕೃಷ್ಣಮೂರ್ತಿ ಎಂ., ಶ್ರೀಮತಿ ಕೆ.ಬಿ. ನೀಲಮ್ಮ, ಶ್ರೀಮತಿ ಮಂಜಮ್ಮ, ಶ್ರೀಮತಿ ಪಾರ್ವತಮ್ಮ, ನಾಗರಾಜಪ್ಪ ಬಿ.ಜಿ., ರಾಜಶೇಖರಪ್ಪ ಎನ್., ಚಂದಪ್ಪರ ನಾಗರಾಜಪ್ಪ, ಕೊಟ್ರೇಶ್ ಕೆ.ಎಸ್., ಮಂಜುನಾಥ ಎ.ಎಂ., ರಾಜಪ್ಪ, ಶ್ರೀಮತಿ ನಂದಿನಿ, ಮಂಜುನಾಥ ಎ.ಎಂ., ಪ್ರೊ. ಪರಶುರಾಮ್ ಖಟಾವಕರ್, ಕಾವ್ಯ ಬಿ.ಕೆ. ಆಗಮಿಸುವರು.

# ಕೀಲು-ಮೂಳೆ ಸವೆತ ತಪಾಸಣಾ ಶಿಬಿರ

ದಾವಣಗೆರೆ, ಜೂ. 9- ಡಾ॥ ಡಿ.ಎಸ್. ಸತ್ಯೇಂದ್ರರಾವ್ ಲೆಗಸಿ ಅಂಡ್ ರಿಸರ್ಚ್ ಫೌಂಡೇಶನ್ ವತಿಯಿಂದ ಕೀಲು-ಮೂಳೆ ಸವೆತದ ತಪಾಸಣೆ ಮತ್ತು ಚಿಕಿತ್ಸಾ ಹಾಗೂ ಎಲ್ಲಾ ತರಹದ ನೋವುಗಳ ನಿರ್ಮೂಲನೆಗೆ - ಮಿರಾಕಲ್ ಥೆರಪಿ ಶಿಬಿರವು ಇದೇ ದಿನಾಂಕ 13ರ ಮಂಗಳವಾರ ಅಕ್ಷರ ಧಾಮ ನಿಲಯದಲ್ಲಿ ಬೆಳಿಗ್ಗೆ 10 ರಿಂದ ಮಧ್ಯಾಹ್ನ 3 ರವರೆಗೆ ನಡೆಯಲಿದೆ. 20 ವರ್ಷ ಮೇಲ್ಪಟ್ಟವರು, ಹೆಣ್ಣುಮಕ್ಕಳು, ಮೈ-ಕೈ ನೋವಿರುವವರು, ಸಕ್ಕರೆ ಕಾಯಿಲೆಯಿಂದ ಬಳಲುತ್ತಿರುವ ಸಾರ್ವಜನಿಕರು ಹಾಗೂ ಆರೋಗ್ಯಾಸಕ್ತರು ಈ ಶಿಬಿರದ ಸದುಪಯೋಗ ಪಡೆದುಕೊಳ್ಳಬಹುದಾಗಿದೆ. ವಿವರಕ್ಕೆ ಸಂಪರ್ಕಿಸಿ : 91640 63608 / 98441 24418.

# ನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಇಂದು ಸಾಂಸ್ಕೃತಿಕ ಸೌರಭ

ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ವಾಣಿಜ್ಯಶಾಸ್ತ್ರ ಶಾಸ್ತ್ರ ವಿಭಾಗದ ವತಿಯಿಂದ ಸಾಂಸ್ಕೃತಿಕ ಸೌರಭ 2023 ಕಾರ್ಯಕ್ರಮವು ಇಂದು ನಡೆಯಲಿದೆ. ಉದ್ಘಾಟನೆ : ಬಿ. ಎನ್. ಮಲ್ಲೇಶ್. ಅಧ್ಯಕ್ಷತೆ : ಎಸ್. ಆರ್. ಅಂಜಿನಪ್ಪ. ಮುಖ್ಯ ಅತಿಥಿಗಳು : ಪ್ರೊ ಕೆ ನಾರಾಯಣಸ್ವಾಮಿ, ಬಿ. ಸಿ. ತಹಸೀಲ್ದಾರ್, ಡಾ. ಮರಳಸಿದ್ದಪ್ಪ, ಶ್ರೀಮತಿ ಗೀತಾದೇವಿ.

# ಸಂಸ್ಕೃತಿ ಸಂಭ್ರಮ ಇಂದು

ಎಸ್.ಬಿ.ಸಿ. ಪ್ರಥಮ ದರ್ಜೆ ಕಾಲೇಜು ಹಾಗೂ ಅಥಣಿ ಸ್ನಾತಕೋತ್ತರ ಕೇಂದ್ರದಲ್ಲಿ ಇಂದು ಬೆಳಿಗ್ಗೆ 10ರಿಂದ ಭಾರತೀಯ ಸಂಸ್ಕೃತಿಯನ್ನು ಬಿಂಬಿಸುವ 'ಸಂಸ್ಕೃತಿ ಸಂಭ್ರಮ 2023' ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ವಿದ್ಯಾರ್ಥಿನಿಯರಿಂದ ನೃತ್ಯ ಸ್ಪರ್ಧೆ ಏರ್ಪಡಿ ಸಲಾಗಿದೆ.

ಕಾಲೇಜಿನ ಅಧ್ಯಕ್ಷ ಬಿ.ಸಿ. ಉಮಾಪತಿ ಉದ್ಘಾ ಟಿಸುವರು. ಕಾಲೇಜಿನ ಪ್ರಾಂಶುಪಾಲ ಡಾ. ಕೆ. ಷಣ್ಮುಖ ಉಪಸ್ಥಿತರಿರುವರು.

# ನಗರದಲ್ಲಿ ಇಂದು ಶಿವಗೋಷ್ಠಿ

ಶಿವಗೋಷ್ಠಿ ಸಮಿತಿ, ಶ್ರೀ ಶಿವಕುಮಾರಸ್ವಾಮಿ ಮಹಾಮಂಟಪ ಹಾಗೂ ಸಾದರ ನೌಕರರ ಬಳಗ ಇವರ ಸಹಯೋಗದಲ್ಲಿ ಶಿವಗೋಷ್ಠಿ 296 ಸ್ಮರಣೆ 68 ಕಾರ್ಯಕ್ರಮವು ಇಂದು ಸಂಜೆ 6.30 ಕ್ಕೆ ತರಳಬಾಳು ಬಡಾವಣೆಯ ಬಸವ ಮಂಟಪದಲ್ಲಿರುವ ಸರ್ವಮಂಗಳ ಸಭಾಭವನದಲ್ಲಿ ನಡೆಯಲಿದೆ.

ಅಧ್ಯಕ್ಷತೆಯನ್ನು ಎಂ.ಬಿ. ಸಂಗಮೇಶ್ವರಗೌಡ್ರು ವಹಿಸುವರು. ಮುಖ್ಯ ಅತಿಥಿಗಳಾಗಿ ಡಾ. ಎನ್. ಕರಿಬಸಪ್ಪ ಚವಲಿಹಳ್ಳಿ ಆಗಮಿಸುವರು. ಕಾರ್ಯಕ್ರಮದಲ್ಲಿ 'ಪುರಾತನ ನಾಯನ್ಮಾರರು' ವಿಷಯ ಕುರಿತು ಗೋಷ್ಠಿ ನಡೆಯುವುದು. ಕಾರ್ಯಕ್ರಮದಲ್ಲಿ ಲಿಂ. ಶರಣ ಬಸವರಾಜ ಶಿವಪುರ ಇವರ ಸ್ಮರಣೆಯನ್ನು ಎಚ್.ಎಸ್. ದ್ಯಾಮೇಶ್ ನಡೆಸಿಕೊಡುವರು. ಕದಳಿ ಮಹಿಳಾ ವೇದಿಕೆ ಅವರಿಂದ ವಚನ ಗಾಯನ ನಡೆಯುವುದು.

# ಲೋಕಸಭಾ ಚುನಾವಣೆಗಾಗಿ ಮತ ಯಂತ್ರಗಳ ಪರಿಶೀಲನೆ ಆರಂಭ

ನವದೆಹಲಿ, ಜೂ. 9 - ಮುಂಬರುವ 2024ರ ಲೋಕಸಭಾ ಚುನಾವಣೆ ಹಿನ್ನೆಲೆಯಲ್ಲಿ ಚುನಾವಣಾ ಆಯೋಗವು ಮತ ಯಂತ್ರಗಳ ಮೊದಲ ಹಂತದ ಪರೀಕ್ಷೆ ಆರಂಭಿಸಿದೆ. ದೇಶಾದ್ಯಂತ ಹಂತ ಹಂತವಾಗಿ ಮತ ಯಂತ್ರ ಹಾಗೂ ವಿ.ವಿ.ಪ್ಯಾಟ್‌ಗಳ ತಪಾಸಣೆ ನಡೆಸಲಾಗು ವುದು ಎಂದು ಕೇಂದ್ರ ಚುನಾವಣಾ ಆಯೋಗದ ಅಧಿಕಾರಿಗಳು ಹೇಳಿದ್ದಾರೆ.

# ನಗರದಲ್ಲಿ ಇಂದು ಫುಡ್ ಮೇಳ

ಸೇಹಾಜ್ ವತಿಯಿದ ಬಾಪೂಜಿ ಬ್ಯಾಂಕ್ ಸಮುದಾಯ ಭವನದಲ್ಲಿ ಇಂದು ಬೆಳಿಗ್ಗೆ 10ರಿಂದ ರಾತ್ರಿ 9 ರವರೆಗೆ ಫುಡ್ ಮೇಳ ಪ್ರದರ್ಶನ ಮತ್ತು ಮಾರಾಟವನ್ನು ಹಮ್ಮಿಕೊಳ್ಳಲಾಗಿದೆ ಎಂದು ಸೀಮಾ ಸುರೇಶ್ ತಿಳಿಸಿದ್ದಾರೆ. ವಿವರಕ್ಕೆ ಸಂಪರ್ಕಿಸಿ : 72599 25547, 98444 41989.

# ಮಂಡಕ್ಕಿಯಲ್ಲಿ ಹಲ್ಲಿ: ಹೋಟೆಲ್ ಮೇಲೆ ದೂರು

ದಾವಣಗೆರೆ, ಜೂ.9- ನಗರದ ಪಿ.ಜೆ. ಬಡಾವಣೆಯ ಹೋಟೆಲ್ ಒಂದರಲ್ಲಿ ಮಂಡಕ್ಕಿ ತಿಂದು, ಹೊಟ್ಟೆ ತೊಳಸಿದಂತಾಗಿ ವಾಂತಿ ಮಾಡಿಕೊಂಡು, ನಂತರ ಮಂಡಕ್ಕಿಯಲ್ಲಿ ಹಲ್ಲಿ ಬಿದ್ದಿರುವುದು ತಿಳಿದು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ಘಟನೆ ಗುರುವಾರ ಬೆಳಿಗ್ಗೆ ನಡೆದಿದ್ದು, ಹೋಟೆಲ್ ಮಾಲೀಕರ ಮೇಲೆ ತೋಳಹುಣಸೆ ಗ್ರಾಮದ ಶೇಖರಪ್ಪ ಎಂಬುವವರು ದಾವಣಗೆರೆ ನಗರ ಠಾಣೆಯಲ್ಲಿ ದೂರು ನೀಡಿದ್ದಾರೆ.

# ಬಿಐಇಟಿಯಲ್ಲಿ ಇಂದು ಪದವಿ ಪ್ರದಾನ

ಬಾಪೂಜಿ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಅಂತಿಮ ಶೈಕ್ಷಣಿಕ ವರ್ಷದ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಸಮಾರಂಭ ಕಾರ್ಯಕ್ರಮವನ್ನು ಇಂದು ಬೆಳಿಗ್ಗೆ 10.30 ಗಂಟೆಗೆ ಕಾಲೇಜಿನ ಆವರಣದಲ್ಲಿರುವ ಎಸ್.ಎಸ್. ಮಲ್ಲಿಕಾರ್ಜುನ್ ಸಾಂಸ್ಕೃತಿಕ ಕೇಂದ್ರದಲ್ಲಿ ಹಮ್ಮಿಕೊಳ್ಳಲಾಗಿದೆ.

ಸಮಾರಂಭದ ಅಧ್ಯಕ್ಷತೆಯನ್ನು ಶಾಸಕ ಶಾಮನೂರು ಶಿವಶಂಕರಪ್ಪ ವಹಿಸಲಿದ್ದು, ಮುಖ್ಯ ಅತಿಥಿಗಳಾಗಿ ಡಿಸಿಪಿ ಜಿ.ಹೆಚ್.ಯತೀಶ್ಚಂದ್ರ, ದಾವಣಗೆರೆ ವಿಶ್ವವಿದ್ಯಾಲಯ ಕುಲಸಚಿವ ಡಾ. ಕೆ. ಶಿವಶಂಕರ್ ಪಾಲ್ಗೊಳ್ಳಲಿದ್ದಾರೆ. ಪ್ರೊ. ವೈ. ವೃಷಭೇಂದ್ರಪ್ಪ, ಪ್ರಾಂಶುಪಾಲ ಡಾ. ಹೆಚ್.ಬಿ.ಅರವಿಂದ ಅವರುಗಳು ಉಪಸ್ಥಿತರಿರುವರು.

# ಎವಿಕೆ ಕಾಲೇಜಲ್ಲಿ ಇಂದು ಪುರಸ್ಕಾರ

ಎ.ವಿ. ಕಮಲಮ್ಮ ಮಹಿಳಾ ಕಾಲೇಜಿನಲ್ಲಿ ಪ್ರಸಕ್ತ ಶೈಕ್ಷಣಿಕ ಸಾಲಿನ ವಿದ್ಯಾರ್ಥಿ ಸಂಘದ ವಾರ್ಷಿಕೋತ್ಸವ ಹಾಗೂ ಪ್ರತಿಭಾ ಪುರಸ್ಕಾರ ಸಮಾರಂಭವು ಇಂದು ಬೆಳಿಗ್ಗೆ 11 ಗಂಟೆಗೆ ಕಾಲೇಜು ಆವರಣದಲ್ಲಿ ಜರುಗಲಿದೆ.

ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ಕಮಲಾ ಸೊಪ್ಪಿನ್ ಅಧ್ಯಕ್ಷತೆ ವಹಿಸಲಿದ್ದು, ಬಾಪೂಜಿ ವಿದ್ಯಾಸಂಸ್ಥೆ ಸದಸ್ಯರಾದ ಪ್ರಭಾ ಮಲ್ಲಕಾರ್ಜುನ್ ಮುಖ್ಯ ಅತಿಥಿಯಾಗಿ ಪಾಲ್ಗೊಳ್ಳಲಿದ್ದಾರೆ. ಪ್ರೊ. ಆರ್.ಆರ್.ಶಿವಕುಮಾರ್, ಎವಿಕೆ ಪದವಿ ಪೂರ್ವ ಕಾಲೇಜಿನ ರವಿ ಬಣಕಾರ, ಡಾ. ರಣಧೀರ, ಡಾ. ಆರ್. ಜಿ. ಕವಿತ, ಎಂ.ಸಂಗೀತ, ಹೆಚ್.ಹೆಚ್. ಸ್ಮಿತಾ, ಟಿ. ಐಶ್ವರ್ಯ ಉಪಸ್ಥಿತರಿರುವರು.

# 12 ರಂದು ವಿಶ್ವ ಬಾಲಕಾರ್ಮಿಕ ವಿರೋಧಿ ದಿನಾಚರಣೆ

## ಮಿಲ್ಲತ್ ಶಾಲೆಯಲ್ಲಿ ಆಯೋಜಿಸಲು ಅಗತ್ಯ ಸಿದ್ದತೆ ಕೈಗೊಳ್ಳಲು ಎ.ಡಿ.ಸಿ.ಪಿ.ಎನ್.ಲೋಕೇಶ್ ಸೂಚನೆ

ದಾವಣಗೆರೆ, ಜೂ.9- ಜಿಲ್ಲಾ ಆಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ, ಕಾರ್ಮಿಕ ಇಲಾಖೆ, ಬಾಲ ಕಾರ್ಮಿಕ ಯೋಜನಾ ಸೊಸೈಟಿ ಹಾಗೂ ವಿವಿಧ ಸಂಘ - ಸಂಸ್ಥೆಗಳ ಸಹಯೋಗದಲ್ಲಿ ಇದೇ ದಿನಾಂಕ 12 ರಂದು ವಿಶ್ವ ಬಾಲಕಾರ್ಮಿಕ ಪದ್ಧತಿ ವಿರೋಧಿ ದಿನಾಚರಣೆಯನ್ನು ಅರ್ಥಯುತವಾಗಿ ಆಚರಿಸಲುಎಲ್ಲಾಇಲಾಖೆಗಳಸಹಕಾರದೊಂದಿಗೆ ಸಿದ್ಧತೆ ಕೈಗೊಳ್ಳಲು ಅಪರ ಜಿಲ್ಲಾಧಿಕಾರಿ ಪಿ.ಎನ್.ಲೋಕೇಶ್ ತಿಳಿಸಿದರು.

ಅವರು, ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಇಂದು ನಡೆದ ವಿಶ್ವ ಬಾಲ ಕಾರ್ಮಿಕ ಪದ್ಧತಿ ವಿರೋಧಿ ದಿನಾಚರಣೆ ಪೂರ್ವ ಸಿದ್ದತಾ ಸಭೆಯಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಕೈಗಾರಿಕೆಗಳು, ಹೋಟೆಲ್, ಮಂಡಕ್ಕಿ ಭಟ್ಟಿ, ಅಂಗಡಿ, ವರ್ಕ್‌ಶಾಪ್‌ಗಳಲ್ಲಿ ಮಕ್ಕಳನ್ನು ದುಡಿಮೆಗೆ ಬಳಸಿಕೊಳ್ಳುವುದು ಅಪರಾಧವಾಗುತ್ತದೆ. ಮಕ್ಕಳು ದೇಶದ ಆಸ್ತಿಯಾಗಿದ್ದು, ಓದಿನಲ್ಲಿ ತೊಡಗಿಕೊಳ್ಳಬೇಕು. ಈ ವೇಳೆ ಮಾನಸಿಕ ಹಾಗೂ ದೈಹಿಕ ವಿಕಸನದ ಸಮಯದಲ್ಲಿ ದುಡಿಮೆಗೆ ಬಳಸಿಕೊಂಡಲ್ಲಿ ಅವರ ಭವಿಷ್ಯ ಕುಂಠಿತವಾಗಲಿದೆ. ಮಕ್ಕಳು ಭವಿಷ್ಯದ ದೇಶದ ಆಸ್ತಿಯಾಗಿದ್ದು, ಅವರಿಗೆ ಶಿಕ್ಷಣ ನೀಡುವ ಮೂಲಕ ಅವರ ಭವಿಷ್ಯಕ್ಕೆ ನೆರವಾಗಬೇಕು. ಈ ಅವಧಿಯಲ್ಲಿ ಅವರನ್ನು ಬಾಲ ಕಾರ್ಮಿಕರನ್ನಾಗಿ ಮಾಡಿಕೊಳ್ಳದೇ ಅವರಿಗೆ ಸಿಗಬೇಕಾದ ಶಿಕ್ಷಣದ ಸೌಕರ್ಯವನ್ನು ಒದಗಿಸಿ ಮಕ್ಕಳ ಹಕ್ಕುಗಳ ಸಂರಕ್ಷಣೆ ಮಾಡುವುದು ಎಲ್ಲರ ಜವಾಬ್ದಾರಿಯಾಗಿದ್ದು, ಈ ನಿಟ್ಟಿನಲ್ಲಿ ಜನರಲ್ಲಿ ಜಾಗೃತಿ ಮೂಡಿಸಬೇಕಾಗಿದೆ ಎಂದರು.

ಬಾಲ ಕಾರ್ಮಿಕ ಪದ್ದತಿ ವಿರೋಧಿ ದಿನಾಚರಣೆಗೆ ಸೀಮಿತವಾಗದೇ ಬಾಲ ಕಾರ್ಮಿಕರು ಕಂಡು ಬಂದಲ್ಲಿ ಅವರನ್ನು ಗುರುತಿಸಿ, ಮುಖ್ಯವಾಹಿನಿಗೆ ತರಲು ಎಲ್ಲಾ ಇಲಾಖೆ ಅಧಿಕಾರಿಗಳು ಮುಂದಾಗಬೇಕು. ಬಾಲ ಕಾರ್ಮಿಕರಾಗಿ ದುಡಿಯುತ್ತಿದ್ದ ಮಕ್ಕಳನ್ನು ರಕ್ಷಣೆ ಮಾಡಿ ಅವರಿಗೆ ವಸತಿಯುತ ಶಾಲೆಗಳಲ್ಲಿ ಪ್ರವೇಶ ಕಲ್ಪಿಸಲು ಅವಕಾಶ ಇದೆ ಎಂದರು.

ಬಾಲ ಕಾರ್ಮಿಕ ಪದ್ದತಿ ವಿರೋಧಿ ದಿನವನ್ನು ಬಹಳ ಅರ್ಥಯುತವಾಗಿ ಆಚರಿಸಲು ಕಾರ್ಮಿಕ ಅಧಿಕಾರಿಗಳು ಸೇರಿದಂತೆ ಇದಕ್ಕೆ ಸಂಬಂಧಿಸಿದ ಇಲಾಖೆಯವರು ಕೈಜೋಡಿಸಬೇಕು. ಜಾಗೃತಿ ಜಾಥಾ ಮತ್ತು ವೇದಿಕೆ ಕಾರ್ಯಕ್ರಮದ ಮೂಲಕ ದಿನಾಚರಣೆ ಆಚರಣೆಯ ಜೊತೆಗೆ ಆಯ್ದ ಶಾಲೆಗಳಲ್ಲಿ ಚರ್ಚಾ ಸ್ಪರ್ಧೆ, ಚಿತ್ರಕಲಾ ಸ್ಪರ್ಧೆಗಳನ್ನು ಏರ್ಪಡಿಸಲು ತಿಳಿಸಿದರು.

ಎಲ್ಲಾ ತಾಲ್ಲೂಕು ಮಟ್ಟದಲ್ಲಿಯೂ ದಿನಾಚರಣೆ ನಡೆಯಲಿದ್ದು, ಜಿಲ್ಲಾ ಮಟ್ಟದಲ್ಲಿ ಮಿಲ್ಲತ್ ಶಾಲೆಯಲ್ಲಿ ವೇದಿಕೆ ಕಾರ್ಯಕ್ರಮವನ್ನು ಆಯೋಜಿಸಲಾಗುತ್ತದೆ ಎಂದು ತಿಳಿಸಿದರು.

ಹೆಚ್ಚುವರಿ ರಕ್ಷಣಾಧಿಕಾರಿ ರಾಮಗುಂಡ ಬಿ.ಬಸರಗಿ, ಕಾರ್ಮಿಕ ಇಲಾಖೆ ಸಹಾಯಕ ಆಯುಕ್ತರಾದ ವೀಣಾ, ಕಾರ್ಮಿಕ ಅಧಿಕಾರಿ ಇಬ್ರಾಹಿಂ ಹಾಗೂ ವಿವಿಧ ಇಲಾಖೆ ಅಧಿಕಾರಿಗಳು ಉಪಸ್ಥಿತರಿದ್ದರು.

# ಯುವಕ, ಯುವತಿಯರು ಸ್ವಾವಲಂಬಿಗಳಾಗಬೇಕು




ಮಾಜಿ ಪಾಲಿಕೆ ಸದಸ್ಯ ದಿನೇಶ್ ಕೆ.ಶೆಟ್ಟಿ ಕರೆ

ದಾವಣಗೆರೆ, ಜೂ. 9 - ಇಂದಿನ ಪರಿಸ್ಥಿತಿಯಲ್ಲಿ ಯುವಕರು ಸ್ವಾವಲಂಬಿಗಳಾಗಲು ಸ್ಪರ್ಧೆ ಎಷ್ಟಿದೆಯೋ ಅದಕ್ಕಿಂತ ಹೆಚ್ಚು ಅವಕಾಶಗಳು ಮತ್ತು ಯೋಜನೆಗಳಿವೆ. ಸರ್ಕಾರ ಹಾಗೂ ಅನೇಕ ಖಾಸಗಿ ಸಂಸ್ಥೆಗಳು ಕೊಡುವ ಯೋಜನೆಗಳ ಪ್ರಯೋಜನ ಪಡೆದು ಎಲ್ಲಾ ವರ್ಗದ ಯುವಕ, ಯುವತಿಯರು ಸ್ವಾವಲಂಬಿಗಳಾಗಬೇಕು ಎಂದು ಮಹಾನಗರ ಪಾಲಿಕೆಯ ಮಾಜಿ ಸದಸ್ಯ ದಿನೇಶ್ ಕೆ.ಶೆಟ್ಟಿ ಕರೆ ನೀಡಿದರು.

ನಗರದ ಹರ್ಷಿತ್ ಕಂಪ್ಯೂಟರ್ಸ್ ವತಿಯಿಂದ ಸಂಸ್ಥೆಯ ಸಭಾಂಗಣದಲ್ಲಿ ನಿನ್ನೆ ಹಮ್ಮಿಕೊಂಡಿದ್ದ ಕಂಪ್ಯೂಟರ್ ಹಾಗೂ ಅಕೌಂಟಿಂಗ್ ತರಬೇತಿಯ ಮುಕ್ತಾಯ ಸಮಾರಂಭದಲ್ಲಿ ಅಭ್ಯರ್ಥಿಗಳಿಗೆ ಪ್ರಮಾಣ ಪತ್ರ ವಿತರಿಸಿ ಅವರು ಮಾತನಾಡಿದರು.

ಕೆಲವು ದಶಕಗಳ ಹಿಂದೆ ಅಂದಿನ ಯುವಕರಿಗೆ ಈಗ ಇರುವಷ್ಟು ತರಬೇತಿ, ಮಾರ್ಗದರ್ಶನ, ವಿದ್ಯಾರ್ಥಿ ವೇತನ ಮತ್ತು ಅವಕಾಶಗಳು ಇರಲಿಲ್ಲ. ಇಂದು ಅವೆಲ್ಲವೂ ಸಾಕಷ್ಟು ಪ್ರಮಾಣದಲ್ಲಿವೆ. ಆದರೆ, ಅವುಗಳ ಪ್ರಯೋಜನ ಪಡೆದು ಉತ್ತಮ ಸಾಧನೆ ಮಾಡಬೇಕಾದದ್ದು ಯುವಕ - ಯುವತಿಯರ ಹೊಣೆಗಾರಿಕೆ. ಅದನ್ನು ಸಮರ್ಥವಾಗಿ ನಿರ್ವಹಿಸಬೇಕು ಎಂದು ಅವರು ತಿಳಿಸಿದರು.

ಪಾಲಿಕೆಯ ಸದಸ್ಯ ಎ.ನಾಗರಾಜ್ ಮಾತನಾಡಿ, ಇಂದು ನಮ್ಮ ಮಹಾನಗರ ಪಾಲಿಕೆಯಿಂದಲೇ ಕಂಪ್ಯೂಟರ್, ಹೊಲಿಗೆ ಯಂತ್ರ ಮೊದಲಾದವುಗಳನ್ನು ಉಚಿತವಾಗಿ ಅರ್ಹ ಫಲಾನುಭವಿ ಗಳಿಗೆ ವಿತರಿಸುತ್ತಿದ್ದೇವೆ. ಯುವಕ ಯುವತಿಯರು ಅದರ ಪ್ರಯೋಜನ ಪಡೆದುಕೊಳ್ಳ ಬೇಕು. ಎಷ್ಟೋ ಖಾಸಗಿ ಅಂಗಡಿ ಹಾಗೂ ಕಚೇರಿಗಳಲ್ಲಿ ಸಾಕಷ್ಟು ಉದ್ಯೋಗಾವಕಾಶಗಳಿವೆ. ಅವುಗಳನ್ನು ಗುರುತಿಸಿ, ಪಡೆದು ಸ್ವಾವಲಂಬಿಗಳಾಗ ಬೇಕು ಎಂದು ತಿಳಿಸಿದರು. ಹರ್ಷಿತ್ ಕಂಪ್ಯೂಟರ್ಸ್ ವ್ಯವಸ್ಥಾಪಕ ಜಿ.ಮಹಾಂತೇಶ್ ಅವರು ಸಂಕಲ್ಪ ಫೌಂಡೇಶನ್ ಮೂಲಕ ಮಾಡುತ್ತಿರುವ ಸಾಮಾಜಿಕ ಸೇವಾ ಕಾರ್ಯಗಳನ್ನು ಶ್ಲಾಘಿಸಿದರು.

ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಪತ್ರಕರ್ತ ಇ.ಎಂ.ಮಂಜುನಾಥ, ಶೈಕ್ಷಣಿಕ ಸಲಹೆಗಾರ ಮತ್ತು ತರಬೇತುದಾರ ಜಗನ್ನಾಥ ನಾಡಿಗೇರ್ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದರು.

ಹರ್ಷಿತ್ ಕಂಪ್ಯೂಟರ್ಸ್ ವ್ಯವಸ್ಥಾಪಕ ಜಿ. ಮಹಾಂತೇಶ್ ಸ್ವಾಗತಿಸಿದರು.


REQUIRED

Receptionist, House Keeping, Qualified Nurses (Male & Female)

Hi-Tech Clinical Laboratories (HCL)

S S Speciality Clinic, Modi Compound, MCC 'A' Block, Davangere - 577002.

Interested Candidates can Contact

91646 28481, 9113957143

ಶ್ರೀ ರಾಘವೇಂದ್ರ ಜ್ಯೋತಿಷ್ಯಾಲಯ

Numero Astrologer & Palmistry



ವಂಶಪಾರಂಪರಿಕ ಮಾಂತ್ರಿಕ ಜ್ಯೋತಿಷ್ಯರು, ನಂ.1 ವಶೀಕರಣ ಸ್ಪೆಷಲಿಸ್ಟ್, ಇಷ್ಟಪಟ್ಟವರು ನಿಮ್ಮಂತಗಲು, ದೇವಿ ಉಪಾಸಕರು, ಸರ್ವಮಂತ್ರ ವಿದ್ಯೆಯಿಂದ ನಿಮ್ಮ ಸಮಸ್ಯೆಗಳಾದ ವಿದ್ಯೆ, ಉದ್ಯೋಗ, ಮದುವೆ ವಿಳಂಬ, ಮಾಟ-ಮಂತ್ರ, ಸ್ತ್ರೀ-ಪುರುಷ ವಶೀಕರಣ, ಲೈಂಗಿಕ ಗುಪ್ತ ಮಾನಸಿಕ ಚಿಂತೆ, ದಾಂಪತ್ಯ ಸಮಸ್ಯೆ

ವಿ.ಸೂ. : ನಿಮ್ಮ ಯಾವುದೇ ಸಮಸ್ಯೆಗಳಿಗೆ 5 ದಿನಗಳೊಳಗೆ ಪರಿಹಾರ ಮಾಡುತ್ತಾರೆ. ಇಂದೇ ಭೇಟಿ ಕೊಡಿ

ವಿಳಾಸ: ಪಂ. ಜಿ.ವಿ. ಭಟ್ಟರ್

ಆಹಾರ್ ಹೋಟೆಲ್, ಗಾಂಧಿ ಸರ್ಕಲ್, ದಾವಣಗೆರೆ.

ಮೊಬೈಲ್ : 94481 78626, 89716 99826

ಅಭಿನಂದನೆಗಳು



ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಜನಪರ ಶಾಸಕರು, ಮಾಜಿ ಸಚಿವರಾದ

ಡಾ॥ ಶಾಮನೂರು ಶಿವಶಂಕರಪ್ಪ

ಅವರಿಗೆ ಹಾಗೂ ದಾವಣಗೆರೆ ಉತ್ತರ ವಿಧಾನಸಭಾ ಕ್ಷೇತ್ರದ ನೂತನ ಗಣಿ, ಭೂ ವಿಜ್ಞಾನ ಹಾಗೂ ತೋಟಗಾರಿಕೆ ಇಲಾಖೆ ಸಚಿವರಾದ

ಎಸ್.ಎಸ್. ಮಲ್ಲಿಕಾರ್ಜುನ್ ಅವರಿಗೆ

ಹೃತ್ಪೂರ್ವಕ ಅಭಿನಂದನೆಗಳು.

ಶ್ರೀ ಮಹೇಶ್ವರ ಸ್ವಾಮಿ ಸೇವಾ ಸಮಿತಿ ಟ್ರಸ್ಟ್, ಬಸಾಪುರ ಶ್ರೀ ಗುರುಸಿದ್ದೇಶ್ವರ ಸ್ವಾಮಿ ಗದ್ದುಗೆ ಸೇವಾ ಸಮಿತಿ ಮತ್ತು ಶ್ರೀ ಸದ್ಗುರು ಶಿವಯೋಗಿ ಹಾಲಸ್ವಾಮಿ ಗದ್ದುಗೆ ಸೇವಾ ಸಮಿತಿ, ಬಸಾಪುರ, ದಾವಣಗೆರೆ



ಗುರುಗ್ರಾಮ್‌ನಲ್ಲಿ ಬೇಸಿಗೆಯ ದಿನದಂದು ಸುಡುವ ಬಿಸಿಲಿನಿಂದ ತನ್ನನ್ನು ತಾನು ರಕ್ಷಿಸಿಕೊಳ್ಳಲು ಬೀದಿ ವ್ಯಾಪಾರಿಯೊಬ್ಬರು ಥರ್ಮಾಕೋಲ್ ಶೀಟ್‌ನ ಆಸರೆ ಪಡೆದಿರುವುದು.

# ತರಳಬಾಳು ಜಗದ್ಗುರುಗಳವರ ಆಶೀರ್ವಾದ ಪಡೆದ ಸಿದ್ದರಾಮಯ್ಯ

ಬೆಂಗಳೂರು, ಜೂ.9- ಶ್ರೀ ತರಳಬಾಳು ಜಗದ್ಗುರು ಬೃಹನ್ಮಠದ ಬಗ್ಗೆ ಸದಾ ಭಕ್ತಿ, ಗೌರವ ಹೊಂದಿರುವ ; ಶ್ರೀ ತರಳಬಾಳು ಜಗದ್ಗುರುಗಳವರ ಸಾಮಾಜಿಕ, ಧಾರ್ಮಿಕ, ರೈತಮುಖಿ, ನ್ಯಾಯಮುಖಿ, ಶೈಕ್ಷಣಿಕ ಕಾರ್ಯಕ್ರಮಗಳ ಬಗ್ಗೆ ಅತೀವ ಮೆಚ್ಚುಗೆ ಹೊಂದಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಗಳಾದ ನಂತರ ಇದೇ ಪ್ರಥಮ ಬಾರಿಗೆ ಶ್ರೀ ತರಳಬಾಳು ಜಗದ್ಗುರು ಶ್ರೀ ಡಾ.ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರನ್ನು ಬೆಂಗಳೂರಿನ ಆರ್.ಟಿ.ನಗರದಲ್ಲಿರುವ ತರಳಬಾಳು ಧಾರ್ಮಿಕ ಮತ್ತು ಸಾಂಸ್ಕೃತಿಕ ಕೇಂದ್ರದಲ್ಲಿ ಶ್ರೀ ಜಗದ್ಗುರುಗಳವರಿಗೆ ಫಲ, ಪುಷ್ಪಹಾರದೊಂದಿಗೆ ಭಕ್ತಿ ಸಮರ್ಪಿಸಿ ಆಶೀರ್ವಾದ ಪಡೆದರು.

ಸಿದ್ದರಾಮಯ್ಯ ಅವರನ್ನು ಶ್ರೀ ಜಗದ್ಗುರುಗಳವರು ಶಾಲು, ಹಾರ, ಸ್ಮರಣಿಕೆಯೊಂದಿಗೆ ಗೌರವಿಸಿದರು.

ಈ ಸಂದರ್ಭದಲ್ಲಿ ತೋಟಗಾರಿಕೆ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್, ಸಚಿವ ಭೈರತಿ ಸುರೇಶ್, ಶಾಸಕರುಗಳಾದ ತಮ್ಮಣ್ಣ, ಶಿವಗಂಗಾ ಬಸವರಾಜು, ಡಿ.ಜಿ.ಶಾಂತನಗೌಡ, ಕೆ.ಎಸ್. ಬಸವಂತಪ್ಪ, ಮಾಜಿ ಶಾಸಕರಾದ ಹೆಚ್.ಎಂ.ರೇವಣ್ಣ, ಮಾಜಿ ಸಂಸದ ಚಂದ್ರಪ್ಪ, ಮಾಜಿ ಸಚಿವ ಹೆಚ್.ಆಂಜನೇಯ, ರಾಜ್ಯ ರೈತ ಸಂಘದ ಅಧ್ಯಕ್ಷ ಹೆಚ್.ಆರ್.ಬಸವರಾಜಪ್ಪ, ಐಪಿಎಸ್ ಅಧಿಕಾರಿ ಯತೀಶ್ ಚಂದ್ರ, ತರಳಬಾಳು ಕೇಂದ್ರದ ಕಾರ್ಯದರ್ಶಿ ಬಾತಿ ವಿಶ್ವನಾಥ್ ಸೇರಿದಂತೆ ಅಪಾರ ಗಣ್ಯರು ಮತ್ತಿತರರು ಹಾಜರಿದ್ದರು.



## ಕುಡಿಯುವ ನೀರಿನ ಅಭಾವ : ಅಧಿಕಾರಿಗಳ ಜೊತೆ ಸಿಎಂ ಚರ್ಚೆ

ಬೆಂಗಳೂರು, ಜೂ. 9 - ರಾಜ್ಯದ ಹಲವು ಕಡೆಗಳಲ್ಲಿ ಕುಡಿಯುವ ನೀರಿನ ಅಭಾವದ ಕುರಿತಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಇಂದು ಹಿರಿಯ ಅಧಿಕಾರಿಗಳೊಂದಿಗೆ ಚರ್ಚೆ ನಡೆಸಿದರು.

ಗೃಹ ಕಚೇರಿ ಕೃಷ್ಣಾದಲ್ಲಿ ಅಧಿಕಾರಿಗಳೊಂದಿಗೆ ಚರ್ಚಿಸಿದ ಮುಖ್ಯಮಂತ್ರಿಗಳು, ರಾಜ್ಯದ ಯಾವ ಭಾಗದಲ್ಲೂ ಕುಡಿಯುವ ನೀರಿಗೆ ಸಮಸ್ಯೆ ಆಗಬಾರದು. ಕಳೆದ ವಾರವೇ ನೀಡಿರುವ ಸೂಚನೆ ಪ್ರಕಾರ ಅಗತ್ಯ ಮುನ್ನೆಚ್ಚರಿಕೆ ಮತ್ತು ಸಿದ್ಧತೆಗಳನ್ನು ಪರಿಣಾಮಕಾರಿಯಾಗಿ ಮಾಡಿಕೊಳ್ಳಬೇಕು ಎನ್ನುವ ಸೂಚನೆಯನ್ನೂ ನೀಡಿದ್ದಾರೆ.

ಈ ಸಂಬಂಧ ಸೋಮವಾರ ಜಿಲ್ಲಾ ಮಟ್ಟದ ಅಧಿಕಾರಿಗಳೊಂದಿಗೆ ಸಭೆ ನಡೆಸಲಾಗುವುದು ಎಂದು ಮುಖ್ಯಮಂತ್ರಿಗಳು ತಿಳಿಸಿದ್ದಾರೆ. ಕೊಪ್ಪಳದಲ್ಲಿ ಕಲುಷಿತ ನೀರು ಸೇವಿಸಿ ಮೃತಪಟ್ಟಿರುವ ಪ್ರಕರಣಗಳು ವರದಿ ಆಗಿರುವ ಹಿನ್ನೆಲೆಯಲ್ಲಿ ಆ ಬಗ್ಗೆ ಅಧಿಕಾರಿಗಳಿಂದ ಮಾಹಿತಿ ಪಡೆದುಕೊಂಡಿದ್ದಾರೆ.

## ಮೆಂಥೋಪ್ಲಸ್ ಡಬ್ಬಿ ನುಂಗಿ ಒಂಭತ್ತು ತಿಂಗಳ ಮಗು ಸಾವು



ಕಂಪ್ಲಿ, ಜೂ.9- ತಲೆನೋವಿಗೆ ಬಳಸುವ ಎರಡೂ ರೂಪಾಯಿಯ ಚಿಕ್ಕ ಮೆಂಥೋಪ್ಲಸ್ ಡಬ್ಬಿ ನುಂಗಿ ಉಸಿರುಗಟ್ಟಿ 9 ತಿಂಗಳ ಮಗುವೊಂದು ಮೃತಪಟ್ಟ ಘಟನೆ ಪಟ್ಟಣದ 5ನೇ ವಾರ್ಡ್ ಇಂದಿರಾನಗರದಲ್ಲಿ ಶುಕ್ರವಾರ ನಡೆದಿದೆ. ಪಟ್ಟಣದ ನಿವಾಸಿಗಳಾದ ಮುತ್ಯಾಲ ರಾಘವೇಂದ್ರ ಮತ್ತು ತುಳಸಿ ದಂಪತಿ ಏಕೈಕ ಪುತ್ರಿ ಪ್ರಿಯದರ್ಶಿನಿ ಮನೆಯಲ್ಲಿ ಆಡುವಾಗ ಮೆಂಥೋಪ್ಲಸ್ ಡಬ್ಬಿ ನುಂಗಿದ್ದಾಳೆ.

ಆಕೆ ಅಳುತ್ತಾ ಬಂದಾಗ, ತುಳಸಿ ಅವರು ಗಂಟಲಲ್ಲಿ ಸಿಲುಕಿದ್ದ ಡಬ್ಬಿ ತೆಗೆಯಲು ಪ್ರಯತ್ನಿಸಿದ್ದಾರೆ. ಉಸಿರಾಟದ ಸಮಸ್ಯೆ ಕಾಣಿಸಿದ್ದರಿಂದ ತಕ್ಷಣವೇ ವೈದ್ಯರ ಬಳಿ ಮಗುವನ್ನು ಕರೆದೊಯ್ಯಲಾಗಿದೆ. ಆದರೆ, ಪ್ರಯೋಜನವಾಗಲಿಲ್ಲ. ಈ ದಂಪತಿಗೆ ವಿವಾಹವಾಗಿ 10 ವರ್ಷಗಳ ಬಳಿಕ ಮಗು ಜನಿಸಿತ್ತು.

ಆಸ್ಪತ್ರೆಗೆ ಬರುವ ಮಾರ್ಗಮಧ್ಯೆಯೇ ಮಗು ಮೃತಪಟ್ಟಿತ್ತು. ಆದರೂ ಪಾಲಕರು ಕೋರಿದಾಗ, ವೈದ್ಯರು ಗಂಟಲಲ್ಲಿದ್ದ ಡಬ್ಬಿ ಹೊರ ತೆಗೆದಿದ್ದಾರೆ.

## ಆಂಬ್ಯುಲೆನ್ಸ್, ಡಯಾಲಿಸಿಸ್ ಟೆಂಡರ್‌ಗಳು ರದ್ದು

ಬೆಂಗಳೂರು, ಜೂ. 9 - ಬಿಜೆಪಿ ಸರ್ಕಾರದ ಅವಧಿಯಲ್ಲಿ ನೀಡಲಾಗಿದ್ದ ಗುತ್ತಿಗೆಗಳ ಮೇಲೆ ಈಗಿನ ಕಾಂಗ್ರೆಸ್ ಸರ್ಕಾರ ಕಣ್ಣಿಟ್ಟಿದ್ದು, ಒಂದೊಂದೇ ಟೆಂಡರ್‌ಗಳನ್ನು ರದ್ದುಗೊಳಿಸುವತ್ತ ಹೆಜ್ಜೆಯನ್ನಿಡುತ್ತಿದೆ.

ಅಲ್ಲದೆ, ಆಗಿನ ಸಚಿವ ಡಾ. ಕೆ. ಸುಧಾಕರ್ ತೆಗೆದುಕೊಂಡಿರುವ ಹಲವು ನಿರ್ಧಾರಗಳ ಬಗ್ಗೆಯೂ ತನಿಖೆ ನಡೆಸುವುದಾಗಿ ಈಗಾಗಲೇ ಹೇಳಿಕೊಂಡಿದೆ.

ಈಗ ಇದರ ಭಾಗವಾಗಿ 108 ಆಂಬ್ಯುಲೆನ್ಸ್ ಹಾಗೂ ಡಯಾಲಿಸಿಸ್ ಕೇಂದ್ರಗಳ ಟೆಂಡರ್‌ಗಳನ್ನು ರದ್ದುಗೊಳಿಸಿ ಆದೇಶಿಸಲಾಗಿದೆ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು,




ಈಗಾಗಲೇ ಕೆಲವು ಟೆಂಡರ್‌ಗಳನ್ನು ರದ್ದುಪಡಿಸಿದ್ದೇವೆ. 108 ಆಂಬ್ಯುಲೆನ್ಸ್ ಸೇವೆ ನೀಡಲು ಜಿವಿಕೆಗೆ ನೀಡಿದ್ದ ಗುತ್ತಿಗೆಯನ್ನು ರದ್ದುಪಡಿಸಲಾಗಿದೆ.

ರಾಜ್ಯದ ಡಯಾಲಿಸಿಸ್ ಕೇಂದ್ರಗಳಲ್ಲಿ ಅವ್ಯವಸ್ಥೆ ಇದೆ. ಹಾಗಾಗಿ ಡಯಾಲಿಸಿಸ್ ಟೆಂಡರ್ ಸಹ ರದ್ದುಪಡಿಸಲಾಗಿದೆ.

ಈಗ ಜರೂರಾಗಿರುವ ಕೆಲಸಗಳನ್ನು ಮಾಡುತ್ತಿದ್ದೇವೆ. ಇಲಾಖೆಯ ಕಾರ್ಯನಿರ್ವಹಣೆ ಬದಲಾವಣೆ ಕೆಲಸ ನಡೆಯುತ್ತಿದೆ. ಅಧಿಕಾರಿಗಳು, ವೈದ್ಯರ ಕಾರ್ಯನಿರ್ವಹಣೆಯನ್ನು ಸರಿಪಡಿಸಬೇಕಿದೆ. ಪಾಲಿಸಿ ವಿಚಾರಗಳನ್ನು ಬದಲಾಯಿಸಬೇಕಿದೆ. ಸಾಮಾನ್ಯ ಜನರಿಗೆ ಗುಣಮಟ್ಟದ ಚಿಕಿತ್ಸೆ ಕೊಡಿಸುತ್ತೇವೆ ಎಂದು ಹೇಳಿದರು.

ನಮ್ಮ ಇಲಾಖೆಯಲ್ಲಿ ಸಾಕಷ್ಟು ಸುಧಾರಣೆ ತರಲು ಪ್ರಯತ್ನ ಮಾಡುತ್ತಿದ್ದೇವೆ. ಅದರ ಭಾಗವಾಗಿ ಈಗಾಗಲೇ ಕೆಲವು ಟೆಂಡರ್‌ಗಳನ್ನು ರದ್ದುಗೊಳಿಸಿದ್ದೇವೆ.

ಬಾಕಿ ಕೆಲಸಗಳನ್ನು ಆದ್ಯತೆ ಮೇರೆಗೆ ಮಾಡುತ್ತಿದ್ದೇವೆ. ತಜ್ಞರ ಜತೆ ಚರ್ಚೆ ಮಾಡಿ ಸುಧಾರಣೆ ತರುತ್ತೇವೆ ಎಂದು ಹೇಳಿದರು.

## ಗೂಡ್ಸೆ ಭಾರತದ ಸುಪುತ್ರ : ಕೇಂದ್ರ ಸಚಿವ ಗಿರಿರಾಜ್

ನವದೆಹಲಿ, ಜೂ. 9 – ಮಹಾತ್ಮ ಗಾಂಧೀಜಿ ಹತ್ಯೆ ಮಾಡಿದ್ದ ನಾಥೂರಾಮ್ ಗೂಡ್ಸೆ ಭಾರತದ ಸುಪುತ್ರ ಎಂದು ಕೇಂದ್ರ ಸಚಿವ ಗಿರಿರಾಜ್ ಸಿಂಗ್ ಬಣ್ಣಿಸುವ ಮೂಲಕ ವಿವಾದಕ್ಕೆ ಕಾರಣರಾಗಿದ್ದಾರೆ.

ಪತ್ರಕರ್ತರೊಂದಿಗೆ ಮಾತನಾಡಿದ ಅವರು, ನಾಥೂರಾಮ್ ಗೂಡ್ಸೆ ಭಾರತದ ಮೇಲೆ ದಾಳಿ ನಡೆಸಿದವನಲ್ಲ. ಮುಘಲ್ ಆಡಳಿತಗಾರರಾದ ಬಾಬರ್ ಹಾಗೂ ಔರಂಗಜೇಬ್ ರೀತಿ ದಾಳಿ ಮಾಡಿಲ್ಲ. ಆತ ಭಾರತದಲ್ಲೇ ಜನಿಸಿದ್ದಾನೆ ಎಂದು ಹೇಳಿದ್ದಾರೆ.

ತಮ್ಮನ್ನು ತಾವು ಬಾಬರ್ ಹಾಗೂ ಔರಂಗಜೇಬ್ ಪುತ್ರರು ಎಂದು ಹೇಳಿಕೊಳ್ಳುವವರು ಭಾರತ ಮಾತೆಯ ನಿಜವಾದ ಮಕ್ಕಳಾಗಲು ಸಾಧ್ಯವಿಲ್ಲ ಎಂದೂ ಅವರು ಹೇಳಿದ್ದಾರೆ.

ಗೂಡ್ಸೆ ಮಹಾತ್ಮಗಾಂಧೀಜಿ ಹಂತಕ. ಅದೇ ವೇಳೆ ಆತ ಭಾರತದ ಸುಪುತ್ರ. ಆತ ಭಾರತದಲ್ಲೇ ಜನಿಸಿದ್ದಾನೆ. ಆತ ಬಾಬರ್ ಹಾಗೂ ಔರಂಗಜೇಬ್ ರೀತಿ ದಾಳಿಕೋರ ಅಲ್ಲ ಎಂದು ಸಚಿವರು ಹೇಳಿದ್ದಾರೆ.

ಮಹಾರಾಷ್ಟ್ರದಲ್ಲಿ ಇತ್ತೀಚೆಗೆ ಕೆಲ ನಗರಗಳಲ್ಲಿ ಹಿಂಸಾಚಾರದ ಘಟನೆಗಳು ನಡೆದಿದ್ದವು. ಈ ಬಗ್ಗೆ ಹೇಳಿಕೆ ನೀಡಿದ್ದ ಮಹಾರಾಷ್ಟ್ರದ ಉಪಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್, ಔರಂಗಜೇಬ್ ಪೀಳಿಗೆಯವರು ರಾಜ್ಯದಲ್ಲಿ ಹುಟ್ಟಿಕೊಂಡಿದ್ದಾರೆ ಎಂದಿದ್ದರು. ಇದಕ್ಕೆ ಪ್ರತಿಕ್ರಿಯಿಸಿದ್ದ ಎ.ಐ.ಎಂ.ಐ.ಎಂ. ಅಧ್ಯಕ್ಷ ಅಸಾದುದ್ದೀನ್ ಒವೈಸಿ, ಗೂಡ್ಸೆಯ ಪೀಳಿಗೆಯವರು ಎಂದು ತಿರುಗೇಟು ನೀಡಿದ್ದರು.

ಈ ಬಗ್ಗೆ ಪತ್ರಕರ್ತರು ಕೇಳಿದ ಪ್ರಶ್ನೆಗೆ ಉತ್ತರಿಸುವಾಗ ಸಚಿವ ಗಿರಿರಾಜ್ ಸಿಂಗ್, ಗೂಡ್ಸೆಯನ್ನು ಸಮರ್ಥಿಸಿಕೊಂಡಿದ್ದಾರೆ.

## ಜನತಾ ಬಜಾರ್ ನಿರ್ದೇಶಕರುಗಳಾಗಿ ಬಿ.ಸಿ. ಶೀಲಾ, ಎಂ.ಕೆ. ಹೊನ್ನೇಶ್ ಆಯ್ಕೆ





ದಾವಣಗೆರೆ, ಜೂ. 9 - ದಾವಣಗೆರೆ ಜಿಲ್ಲಾ ಕೇಂದ್ರ ಸಹಕಾರ ಸಗಟು ಮಾರಾಟ ಮಳಿಗೆ (ಜನತಾ ಬಜಾರ್) ಆಡಳಿತ ಮಂಡಳಿ ನಿರ್ದೇಶಕರುಗಳಾಗಿ ಎಂ.ಕೆ. ಹೊನ್ನೇಶ್ ಮತ್ತು ಶ್ರೀಮತಿ ಬಿ.ಸಿ.ಶೀಲಾ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಜನತಾ ಬಜಾರ್ ಆಡಳಿತ ಮಂಡಳಿಯಲ್ಲಿ ತೆರವಾಗಿದ್ದ ಎರಡು ಸ್ಥಾನಗಳಿಗೆ 'ಎ' ತರಗತಿ ಸದಸ್ಯ ಸ್ಥಾನದಿಂದ ಎಂ.ಕೆ. ಹೊನ್ನೇಶ್ ಹಾಗೂ 'ಸಿ' ತರಗತಿ ಮಹಿಳಾ ಸದಸ್ಯ ಸ್ಥಾನದಿಂದ ಶ್ರೀಮತಿ ಬಿ.ಸಿ. ಶೀಲಾ ಚುನಾಯಿತಗೊಂಡಿದ್ದಾರೆ.

ಸಹಕಾರಿ ಧುರೀಣರಾಗಿದ್ದ ಬಿ.ವಿ. ಚಂದ್ರಶೇಖರ್ ಅವರ ನಿಧನದಿಂದಾಗಿ ಮತ್ತು ನಿರ್ದೇಶಕರೊಬ್ಬರು ನೀಡಿದ್ದ ರಾಜೀನಾಮೆಯಿಂದಾಗಿ ತೆರವಾಗಿದ್ದ ಎರಡು ಸ್ಥಾನಗಳಿಗೆ ಇದೇ ದಿನಾಂಕ 14ರಂದು ಚುನಾವಣೆ ನಿಗದಿಯಾಗಿತ್ತು. ಚುನಾವಣಾ ಪ್ರಕ್ರಿಯೆಯಲ್ಲಿ ಉಮೇದುವಾರಿಕೆ ಅರ್ಜಿಯನ್ನು ಹೊನ್ನೇಶ್ ಮತ್ತು ಶೀಲಾ ಮಾತ್ರ ಸಲ್ಲಿಸಿದ್ದ ಕಾರಣದಿಂದಾಗಿ ಅವರಿಬ್ಬರ ಆಯ್ಕೆ ಅವಿರೋಧವಾಗಿ ನಡೆಯಿತು.

ತೆರವಾಗಿದ್ದ ಬಿವಿಸಿ ಸ್ಥಾನಕ್ಕೆ ಅವರ ಹಿರಿಯ ಪುತ್ರಿ ಬಿ.ಸಿ ಶೀಲಾ ಹಾಗೂ ಮತ್ತೊಂದು ಸ್ಥಾನಕ್ಕೆ ಬಿವಿಸಿ ಆಪ್ತ ಬಳಗದಲ್ಲಿ ಗುರುತಿಸಿಕೊಂಡಿದ್ದ ಹೊನ್ನೇಶ್ ಆಯ್ಕೆಯಾಗಿದ್ದಾರೆ.

## ನೋಟು ವಿನಿಮಯಕ್ಕೆ ಗುರುತಿನ ಚೀಟಿ

**ತುರ್ತು ವಿಚಾರಣೆಗೆ ಸುಪ್ರೀಂ ಕೋರ್ಟ್ ನಕಾರ**

ನವದೆಹಲಿ, ಜೂ. 9 - ಯಾವುದೇ ಗುರುತಿನ ಚೀಟಿ ಇಲ್ಲದೇ 2,000 ರೂ.ಗಳ ನೋಟುಗಳ ಬದಲಾವಣೆ ಮಾಡುತ್ತಿರುವುದನ್ನು ತಡೆಯಬೇಕೆಂಬ ಅರ್ಜಿಯ ತುರ್ತು ವಿಚಾರಣೆಗೆ ಸುಪ್ರೀಂ ಕೋರ್ಟ್ ನಿರಾಕರಿಸಿದೆ.

ಈ ವಿಷಯದ ವಿಚಾರಣೆಗೆ ಯಾವುದೇ ಅವಸರವಿಲ್ಲ ಎಂದು ರಜೆ ಅವಧಿಯ ಪೀಠದ ನ್ಯಾಯಮೂರ್ತಿಗಳಾದ ಅನಿರುದ್ಧ ಬೋಸ್ ಹಾಗೂ ರಾಜೇಶ್ ಬಿಂದಾಲ್ ತಿಳಿಸಿದರು. ಈ ವಿಷಯವನ್ನು ಬೇಸಿಗೆ ರಜೆಯ ನಂತರ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಅವರ ಪೀಠದ ಎದುರು ಮಂಡಿಸಲು ಸುಪ್ರೀಂ ಕೋರ್ಟ್ ಪೀಠ ಹೇಳಿದೆ.

## ಚಿರತೆ ದಾಳಿ : ಮಾಲೀಕನನ್ನು ಕಾಪಾಡಿದ ಹಸು



ಚನ್ನಗಿರಿ, ಜೂ. 9- ದಿಢೀರ್ ನಡೆದ ಚಿರತೆ ದಾಳಿಯಿಂದ ಹಸುವೊಂದು ತನ್ನ ಮಾಲೀಕನನ್ನು ರಕ್ಷಿಸಿದ ಘಟನೆ ತಾಲ್ಲೂಕಿನ ಉಬ್ರಾಣಿ ಹೋಬಳಿಯ ಕೊಡಕಿಕೆರೆ ಗ್ರಾಮದ ಬಳಿಯ ಅರಣ್ಯ ಪ್ರದೇಶದಲ್ಲಿ ಬುಧವಾರ ನಡೆದಿದೆ.

ಕೊಡಕಿಕೆರೆ ನಿವಾಸಿ ಕರಿಹಾಲಪ್ಪ (58) ತಮ್ಮ ಹಸುವನ್ನು ಮೇಯಿಸಲು ಗ್ರಾಮದ ಸನಿಹದಲ್ಲಿರುವ ಅರಣ್ಯ ಪ್ರದೇಶಕ್ಕೆ ಹೋಗಿದ್ದರು. ಈ ವೇಳೆ ಪೊದೆಯೊಂದರಲ್ಲಿ ಅಡಗಿ ಕುಳಿತಿದ್ದ ಚಿರತೆಯು ಅವರ ಮೇಲೆ ದಿಢೀರ್ ದಾಳಿ ನಡೆಸಿದೆ. ಇದನ್ನು ಕಂಡು ಓಡಿಬಂದ ಹಸು, ಕೊಂಬಿನಿಂದ ಚಿರತೆಗೆ ತಿವಿದು ಅದನ್ನು ಓಡಿಸಿ ಕರಿಹಾಲಪ್ಪ ಅವರನ್ನು ರಕ್ಷಿಸಿದೆ.

ಚಿರತೆಯು ಏಕಾಏಕಿ ನನ್ನ ಮೇಲೆ ಎರಗಿ ಬೆನ್ನು ಮತ್ತು ಕೈಯ್ಯನ್ನು ಪರಚಿತು. ಕೈಯಲ್ಲಿದ್ದ ಕೋಲಿನಿಂದ ಹೊಡೆದು ಅದನ್ನು ಓಡಿಸಲು ಪ್ರಯತ್ನಿಸಿದೆ. ಆದರೆ ಚಿರತೆ ಬೆದರದೆ ದಾಳಿ ಮುಂದುವರೆಸಿತ್ತು. ಸನಿಹದಲ್ಲೇ ಮೇಯುತ್ತಿದ್ದ ಹಸು ನನ್ನ ಅಸಹಾಯಕತೆ ಕಂಡು ನೆರವಿಗೆ ಧಾವಿಸಿ, ಕೊಂಬಿನಿಂದ ತಿವಿಯುತ್ತಿದ್ದಂತೆಯೇ ಹೆದರಿದ ಚಿರತೆಯು ಸ್ಥಳದಿಂದ ಕಾಲ್ಕಿತ್ತಿತು. ಹಸುವಿನಿಂದಾಗಿ ನನ್ನ ಜೀವ ಉಳಿಯಿತು ಎಂದು ಕರಿಹಾಲಪ್ಪ ಹೇಳಿದ್ದಾರೆ.

ಪ್ರಾಣಿಗಳು ಆಹಾರ ಮತ್ತು ನೀರು ಅರಸಿ ಕಾಡಂಚಿನ ಗ್ರಾಮಗಳಿಗೆ ಬರುತ್ತಿವೆ. ಚಿರತೆ ಸೆರೆಗೆ ಕಾರ್ಯಾಚರಣೆ ಕೈಗೊಂಡಿದ್ದು, ಸಿಬ್ಬಂದಿ ಸ್ಥಳದಲ್ಲಿ ಮೊಕ್ಕಾಂ ಹೂಡಿದ್ದಾರೆ ಎಂದು ಚನ್ನಗಿರಿ ವಲಯ ಅರಣ್ಯಾಧಿಕಾರಿ ಎಚ್. ಸತೀಶ್ ಹೇಳಿದ್ದಾರೆ.

## ಸಾರ್ವತ್ರಿಕ ಸಾಮಾಜಿಕ ಭದ್ರತೆಗೆ ವಿರೋಧ

ಲಖ್ನೌ, ಜೂ. 9 – ಸಾರ್ವತ್ರಿಕ ಸಾಮಾಜಿಕ ಭದ್ರತೆ ವಿಚಾರವನ್ನು ತಳ್ಳಿ ಹಾಕಿರುವ ಕೇಂದ್ರ ಮುಖ್ಯ ಆರ್ಥಿಕ ಸಲಹೆಗಾರ ವಿ. ಅನಂತ ನಾಗೇಶ್ವರನ್, ಅಗತ್ಯವಿರುವವರಿಗೆ ಮಾತ್ರ ಸಾಮಾಜಿಕ ನೆರವು ನೀಡಬೇಕು ಎಂದಿದ್ದಾರೆ.

ಭಾರತದಂತಹ ಅಭಿವೃದ್ಧಿ ಶೀಲ ದೇಶಗಳಿಗೆ ಸಾರ್ವತ್ರಿಕ ಸಾಮಾಜಿಕ ಭದ್ರತೆ ಸೂಕ್ತವಲ್ಲ. ಸಹಜ ಆರ್ಥಿಕ ಬಳವಣಿಗೆ ಜನರ ಆಶಯಗಳನ್ನು ಈಡೇರಿಸುತ್ತದೆ ಎಂದವರು ಹೇಳಿದ್ದಾರೆ.

ಸಾರ್ವತ್ರಿಕವಾಗಿ ಸಾಮಾಜಿಕ ಭದ್ರತೆ ನೀಡುವುದರಿಂದ ಜನರು ತಾವಾಗಿಯೇ ಅವಕಾಶಕ್ಕೆ ಪ್ರಯತ್ನ ನಡೆಸಲು ಉತ್ತೇಜನ ಸಿಗುವುದಿಲ್ಲ. ಆದರೆ, ಆರ್ಥಿಕ ಚಟುವಟಿಕೆಗಳಲ್ಲಿ ಪಾಲ್ಗೊಳ್ಳಲು ಸಾಧ್ಯವಾಗದೇ ಇರುವವರಿಗೆ ಸೀಮಿತವಾಗಿ ನೆರವು ನೀಡಬೇಕಿದೆ. ಅವರು ಆರ್ಥಿಕತೆಯಲ್ಲಿ ಅರ್ಥಪೂರ್ಣವಾಗಿ ತೊಡಗಿಕೊಳ್ಳುವವರೆಗೂ ನೆರವು ನೀಡಬೇಕಿದೆ ಎಂದರು.

## ವಿನಿಮಯ ಉಲ್ಲಂಘನೆ : ಶಓಮಿಗೆ ಇಡಿ ನೋಟಿಸ್

ನವದೆಹಲಿ, ಜೂ. 9 – ವಿದೇಶಿ ವಿನಿಮಯ ಉಲ್ಲಂಘನೆ ಪ್ರಕರಣಕ್ಕೆ ಸಂಬಂಧಿಸಿದಂತೆ ಚೀನಾದ ಮೊಬೈಲ್ ಉತ್ಪಾದನಾ ಕಂಪನಿಯಾದ ಶಓಮಿ ಹಾಗೂ ಅದರ ಮುಖ್ಯ ಹಣಕಾಸು ಅಧಿಕಾರಿ ಸಮೀರ್ ರಾವ್, ಮಾಜಿ ವ್ಯವಸ್ಥಾಪಕ ನಿರ್ದೇಶಕ ಮನು ಜೈನ್ ಹಾಗೂ ಮೂರು ವಿದೇಶಿ ಬ್ಯಾಂಕುಗಳಿಗೆ ನೋಟಿಸ್ ಕಳಿಸಿರುವುದಾಗಿ ಜಾರಿ ನಿರ್ದೇಶನಾಲಯ ತಿಳಿಸಿದೆ.

5,551 ಕೋಟಿ ರೂ.ಗಳ ವಿನಿಮಯ ಉಲ್ಲಂಘನೆ ಆರೋಪಕ್ಕೆ ಸಂಬಂಧಿಸಿದಂತೆ ನೋಟಿಸ್‌ಗಳನ್ನು ಕಳಿಸಲಾಗಿದೆ. ಈ ಹಿನ್ನೆಲೆಯಲ್ಲಿ ಶಓಮಿಗೆ ಸೇರಿದ 5,551.27 ಕೋಟಿ ರೂ.ಗಳನ್ನು ಬ್ಯಾಂಕ್ ಖಾತೆಗಳಿಂದ ಮುಟ್ಟುಗೋಲು ಹಾಕಿಕೊಳ್ಳಲಾಗಿದೆ.

ವಿದೇಶಿ ವಿನಿಮಯ ಕಾಯ್ದೆ ಉಲ್ಲಂಘಿಸಿ ಹಣವನ್ನು ಅಕ್ರಮವಾಗಿ ವಿದೇಶಕ್ಕೆ ರವಾನಿಸಲಾಗುತ್ತಿತ್ತು. ಈ ಹಿನ್ನೆಲೆಯಲ್ಲಿ ಕ್ರಮ ತೆಗೆದುಕೊಂಡಿರುವುದಾಗಿ ಜಾರಿ ನಿರ್ದೇಶನಾಲಯ ತಿಳಿಸಿದೆ.

## ಟ್ರಂಪ್ ವಿರುದ್ಧ ಗೌಪ್ಯ ಕಡತಗಳ ಪ್ರಕರಣ

ಮಿಯಾಮಿ, ಜೂ. 9 - ಅಮೆರಿಕದ ಮಾಜಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಗೌಪ್ಯ ಕಡತಗಳನ್ನು ಸರಿಯಾಗಿ ನಿರ್ವಹಿಸಿಲ್ಲ ಎಂದು ದೋಷಾರೋಪ ಮಾಡಲಾಗಿದೆ. ಅಮೆರಿಕದ ಇತಿಹಾಸದಲ್ಲಿ ಕ್ರಿಮಿನಲ್ ಪ್ರಕರಣ ಎದುರಿಸುತ್ತಿರುವ ಮೊದಲ ಮಾಜಿ ಅಧ್ಯಕ್ಷ ಅವರಾಗಿದ್ದಾರೆ. ಟ್ರಂಪ್ 2024ರ ಅಧ್ಯಕ್ಷೀಯ ಚುನಾವಣೆ ಎದುರಿಸುವ ಸಿದ್ಧತೆಯಲ್ಲಿರುವ ಮಧ್ಯೆ ಈ ಬೆಳವಣಿಗೆಯಾಗಿದೆ. ಟ್ರಂಪ್ ಆರೋಪ ಸಾಬೀತಾದರೆ ಅವರಿಗೆ ಜೈಲು ಶಿಕ್ಷೆಯಾಗಲಿದೆ.

ಟ್ರಂಪ್ ವಿರುದ್ಧ ಇನ್ನಷ್ಟು ಪ್ರಕರಣಗಳಿವೆ. ಹೀಗಾಗಿ ಅವರು ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸುವ ಹಾದಿ ಕಠಿಣವಾಗಿದೆ.




**ಜಿಎಂ ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿಯಮಿತ**

ಆಡಳಿತ ಕಛೇರಿ: #652, ಸೂರಜ್ ಆರ್ಕೇಡ್, ಮಂಡಿಪೇಟೆ, ದಾವಣಗೆರೆ-1

**ವಾರ್ಷಿಕ ಮಹಾಸಭೆಯ ಆಹ್ವಾನ ಪತ್ರಿಕೆ**

ಜಿಎಂ ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿಯಮಿತ ದಾವಣಗೆರೆ, ಇದರ 2022-23ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯನ್ನು ದಿನಾಂಕ: 11-06-2023 ನೇ ಭಾನುವಾರ ಬೆಳಿಗ್ಗೆ 11.30ಕ್ಕೆ ದಾವಣಗೆರೆ ನಗರದ ಜಿ.ಎಂ.ಐ.ಟಿ. (ಇಂಜಿನಿಯರಿಂಗ್ ಕಾಲೇಜ್) ಆವರಣದಲ್ಲಿರುವ " ಜಿ.ಎಂ. ಹಾಲಮ್ಮ ಸಭಾಂಗಣದಲ್ಲಿ " ಅಧ್ಯಕ್ಷರಾದ ಶ್ರೀ ಜಿ.ಎಂ.ಪ್ರಸನ್ನಕುಮಾರ್ ಇವರ ಅಧ್ಯಕ್ಷತೆಯಲ್ಲಿ ನಡೆಸಲು ನಿರ್ಧರಿಸಿದ್ದು, ಮಾನ್ಯ ಸದಸ್ಯರೆಲ್ಲರೂ ಸಕಾಲಕ್ಕೆ ಆಗಮಿಸಿ ವಾರ್ಷಿಕ ಮಹಾಸಭೆಯಲ್ಲಿ ಭಾಗವಹಿಸಬೇಕೆಂದು ಕೋರುತ್ತೇವೆ.

ವಿ.ಸೂ: ಈಗಾಗಲೇ ಆಹ್ವಾನ ಪತ್ರಿಕೆಗಳನ್ನು ಕಳುಹಿಸಲಾಗಿದ್ದು, ತಲುಪದೇ ಇರುವ ಸದಸ್ಯರು ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.

**2022-23ನೇ ಸಾಲಿನ ಪ್ರಗತಿಯ ಪಕ್ಷಿನೋಟ**

ದಿನಾಂಕ: 31-03-2023 ಕ್ಕೆ ಇದ್ದಂತೆ — ಮೊತ್ತ ಕೋಟಿ ರೂ.ಗಳಲ್ಲಿ

| ಷೇರು ಬಂಡವಾಳ | ಮೀಸಲು & ಇತರೆ ನಿಧಿಗಳು | ಠೇವಣಿಗಳು |
|---|---|---|
| ₹ 7.22 | ₹ 11.28 | ₹ 202.74 |
| **ಸಾಲ ಮತ್ತು ಮುಂಗಡಗಳು** | **ದುಡಿಯುವ ಬಂಡವಾಳ** | **ನಿವ್ವಳ ಲಾಭ** |
| ₹ 173.32 | ₹ 221.25 | ₹ 3.68 |

**ಆಕರ್ಷಕ ಬಡ್ಡಿ ದರಗಳು**

| ಕ್ರ.ಸಂ | ವಿವರಗಳು | ನಾಗರಿಕರಿಗೆ | ಹಿರಿಯ ನಾಗರಿಕರಿಗೆ |
|---|---|---|---|
| 1 | 15 ದಿನದಿಂದ 45 ದಿನಗಳ ವರೆಗೆ | 4.00% | 4.00% |
| 2 | 46 ದಿನದಿಂದ 90 ದಿನಗಳ ವರೆಗೆ | 4.25% | 4.25% |
| 3 | 91 ದಿನದಿಂದ 180 ದಿನಗಳ ವರೆಗೆ | 4.50% | 4.50% |
| 4 | 181 ದಿನದಿಂದ 1 ವರ್ಷದವರೆಗೆ | 6.00% | 6.50% |
| 5 | 1 ವರ್ಷದಿಂದ ಮೇಲ್ಪಟ್ಟು 2 ವರ್ಷಗಳ ವರೆಗೆ | 8.25% | 8.75% |
| 6 | 2 ವರ್ಷದಿಂದ ಮೇಲ್ಪಟ್ಟು 3 ವರ್ಷಗಳ ವರೆಗೆ | 8.50% | 9.00% |
| 7 | 3 ವರ್ಷದಿಂದ ಮೇಲ್ಪಟ್ಟು 5 ವರ್ಷಗಳ ವರೆಗೆ | 8.00% | 8.50% |

ದಾವಣಗೆರೆ ಶಾಖೆ: ಆಡಳಿತ ಕಛೇರಿ: #652, ಸೂರಜ್ ಆರ್ಕೇಡ್, ಮಂಡಿಪೇಟೆ, ದಾವಣಗೆರೆ-577001 Ph: 08192-295511

ಭೀಮಸಮುದ್ರ ಶಾಖೆ: ಈಶ್ವರ ಕಾಂಪ್ಲೆಕ್ಸ್, ಮೊದಲನೇ ಮಹಡಿ, ಮುಖ್ಯ ರಸ್ತೆ, ಭೀಮಸಮುದ್ರ. Ph: 08194-262777

ಸಂಗೂರು ಶಾಖೆ, ಹಾವೇರಿ ಜಿಲ್ಲೆ: ಜಿ.ಎಂ.ಶುಗರ್ಸ್ & ಎನರ್ಜಿ ಲಿ. ಆವರಣ, ಸಂಗೂರು. Ph: 08375-284234

ಚಿತ್ರದುರ್ಗ ಶಾಖೆ: 'ಶ್ರೇಯ ಕಾಂಪ್ಲೆಕ್ಸ್' ನೆಲ ಮಳಿಗೆ, 3ನೇ ಕ್ರಾಸ್, ಜೆ.ಸಿ.ಆರ್. ಸರ್ಕಲ್, ಚಿತ್ರದುರ್ಗ. Ph: 08194-295760

ಚನ್ನಗಿರಿ ಶಾಖೆ: ಮೊದಲನೇ ಮಹಡಿ, ಶ್ರೀ ಮರುಳುಸಿದ್ದೇಶ್ವರ ಕಾಂಪ್ಲೆಕ್ಸ್, NH-13, ಚಿತ್ರದುರ್ಗ ಮುಖ್ಯ ರಸ್ತೆ, ಚನ್ನಗಿರಿ. Ph: 08189-295877

ಶಿವಮೊಗ್ಗ ಶಾಖೆ: #374, ಮೊದಲನೇ ಮಹಡಿ, ಷಿಬಾ ಕಾಂಪ್ಲೆಕ್ಸ್, ಜೈಲ್ ರಸ್ತೆ, ಶಿವಮೊಗ್ಗ. Ph: 08182-296037

ಅಧ್ಯಕ್ಷರು — ಉಪಾಧ್ಯಕ್ಷರು — ಪ್ರಧಾನ ವ್ಯವಸ್ಥಾಪಕರು